(THE HON'BLE SRI K. CHENGALARAYA REDDY).

certainly be taken note of by Government, considered and suitable action taken by them. That much I can assure Hon'ble Members.

RESOLUTIONS.

Resolution No. 2 (concld).

Introduction of Prohibition in Hassan District.

Mr. SPEAKER (The Hon'ble Sri V. Venkatappa).—Discussion on Resolution No. 2 * which had not concluded yesterday will how be resumed, Sri B. Channabyre Gowda.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ) ಅಧ್ಯಕ್ಷರೇ, ಈಗ ಸಭೆಯ ಮುಂದಿರತಕ್ಕ ನಿರ್ಣಯಕ್ಕೆ ಶ್ರೀ ಬಿ. ಹುಚ್ಚೇಗೌಡರು ತಂದಿರುವ ತಿದ್ದುಪಡಿಯನ್ನು ಪುಷ್ಟೀಕರಿಸುತ್ತಾ ಎರಡು ಅಂಶಗಳನ್ನು ಸರ್ಕಾರದ ವರಗಮನಕ್ಕೆ ತರುತ್ತೇನೆ. ಸ್ವಾಮಿ, ಹಿಂದೆ ಮುಖ್ಯ ಮಂತ್ರಿಗಳು ಅವರ ಭಾಷಣದಲ್ಲಿ ಪಾನನಿರೋಧವನ್ನು ಸಂಸ್ಥಾನಾಮಳೆ 1951ನೇ ಸಾಲಿನ ಹೊತ್ತಿಗೆ ಸಂಪೂರ್ಣವಾಗಿ ಜಾರಿಗೆ ತರುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಜನತೆ ಮತ್ತು ನಾವು ಅದನ್ನು ನಂಬಿ ಕೊಂಡು ಕಾಂಗ್ರೆಸ್ ಸರ್ಕಾರದವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸಿದೆವು. ಈಗ ಏನಾಗಿದೆ ಎಂದರೆ ಶ್ರೀ ಹುಚ್ಚೇಗೌಡರು ತಂದಿರುವ ತಿದ್ದುಪಡಿಯಂತೆ ಸಂಸ್ಥಾನಾಮಳೆ ಪಾನನಿರೋಧವನ್ನು ಜಾರಿಗೆ ತರುವುದಕ್ಕಾಗುವುದಿಲ್ಲ, ಇನ್ನು ಸ್ವಲ್ಪ ನಿಧಾನವಾಗುತ್ತದೆ ಎಂದು ನೀವು ಹೇಳುತ್ತಿದ್ದೀರಿ. ಮಾನ್ಯ ಸದಸ್ಯರಾದ ಶ್ರೀ ಎಲ್. ಸಿದ್ದಪ್ಪನವರೂ ಕೂಡ ಭಾಷಣಮಾಡುತ್ತಾ ತಕ್ಷಣ ಪಾನನಿರೋಧ ಸಂಸ್ಥಾನದಲ್ಲಿ ಜಾರಿಗೆ ಬರಬೇಕೆಂದು ಹೇಳಿದರು ಆದರೆ ಕೊನೆಗೆ ಮುಖ್ಯಮಂತ್ರಿಗಳ ಉತ್ತರದ ಭಾವವನ್ನು ಅರಿತು, ನಿಮ್ಮ ಕೈಯಲ್ಲಿ ಆಗುವುದಿಲ್ಲ; ಹೋಗಲಿ ಜಾರಿ ಮಾಡಿರುವ ಕಡೆಗಳಲ್ಲೂ ತೆಗೆದು ಹಾಕಿ ಬಿಡಿ ಎಂದು ಹೇಳಿದರು. ಶ್ರೀ ಹನುಮಂತಪ್ಪನವರು ಮತ್ತೆ ಇನ್ನೂ ಕೆಲವರು ಕಾಂಗ್ರೆಸ್ ಸರ್ಕಾರವನ್ನು ಬಹಳವಾಗಿ ಹೊಗಳಿದರು. ಆ ರೀತಿ 3–4 ಜಿಲ್ಲೆಗಳವರು ಹೊಗಳಿದರೆಂದರೆ, ಇನ್ನು ಮೂರು ನಾಲ್ಕು ಜಿಲ್ಲೆಗಳವರು ಕಾಂಗ್ರೆಸ್ ಸರ್ಕಾರವನ್ನು ಬಯ್ಯುತ್ತಾರೆ ಎಂದು ಚೆನ್ನಾಗಿ ಅರ್ಥವಾಗುತ್ತದೆ. ಆದ್ದರಿಂದ ಸರ್ಕಾರವನ್ನು ಹೊಗಳುವುದಾಗಲೀ, ಬಯ್ಯುವುದಾಗಲೀ ಬೇಕಾಗಿಲ್ಲ. ಮಾನ್ಯ ಮಂತ್ರಿಗಳು ಭಾಷಣ ಮಾಡುವಾಗ ಜನಗಳಿಗೆ ಕೊಟ್ಟ ವಾಗ್ದಾನವನ್ನು ಉಳಿಸಿಕೊಂಡು, ನೀತಿಯುತವಾಗಿ ಸರ್ಕಾರದ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಬಯಸುತ್ತೇನೆ. ಒಂದು ಡಿಸ್ಟ್ರಿಕ್ಟ್‌ನಲ್ಲಿ ಪಾನನಿರೋಧಮಾಡಿ ಮತ್ತೊಂದು ಡಿಸ್ಟ್ರಿಕ್ಟ್‌ನಲ್ಲಿ ಮಾಡದಿದ್ದರೆ ಅದರಿಂದ ಜನಗಳಿಗೆ ಏನು ತೊಂದರೆ, ಎಷ್ಟು ಅನೀತಿ ಇರುತ್ತದೆ, ಅಪಾಯ ಏನು, ಸರ್ಕಾರದವರಿಗೆ ಹೇಗೆ ಕೆಟ್ಟ ಹೆಸರು ಬರುತ್ತದೆ ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಬೆಂಗಳೂರು ಡಿಸ್ಟ್ರಿಕ್ಟ್‌ನ ಹೊಸೂರು ತಾಲ್ಲೂಕು ಕೋಲಾರ ಡಿಸ್ಟ್ರಿಕ್ಟ್‌ನ ಗಡಿಯಲ್ಲಿದೆ. ಇಲ್ಲಿಗೆ ಆ ಪ್ರದೇಶದಿಂದ ಅನೇಕ ಜನ ಕಾರುಗಳಲ್ಲಿ, ಬಸ್ಸುಗಳಲ್ಲಿ, ರೈಲಿನಲ್ಲಿ ಬಂದು ಒಂದೆರಡು ದಿನ ಇಲ್ಲೇ ಇದ್ದು ಚೆನ್ನಾಗಿ ಕುಡಿದು ಸಿಕ್ಕಸಿಕ್ಕಲ್ಲಿ ಉರುಳಾಡಿ ಸಿಕ್ಕಾಪಟ್ಟೆ ತಿರುಗಾಡಿ ಸತ್ತು ಸುಣ್ಣವಾಗಿ ವಾಪಸು ಹೋಗುತ್ತಾರೆ. ಒಂದು ಸಾರಿ ಬಂದರೆ 15 ರೂಪಾಯಿಗಳ ವರೆಗೆ ಮಾಮೂಲಾಗಿ ಎಷ್ಟು ಕುಡಿಯುತ್ತಿದ್ದರೋ ಅದಕ್ಕೆ ಹತ್ತರಷ್ಟು ಎರಡೇ ದಿನದಲ್ಲಿ ಕುಡಿದು, ದುಡ್ಡು ಖರ್ಚು ಮಾಡಿಕೊಂಡು ಜನಗಳು ಪಡುತ್ತಿರುವ ಕಷ್ಟ, ತೊಂದರೆ ನೆನೆಸಿಕೊಂಡರೆ ವ್ಯಸನವಾಗುತ್ತದೆ. ಚೆನ್ನಾಗಿ ಕುಡಿದು ಬಂದು ರಸ್ತೆಯಲ್ಲೇ ಪಾಂತಿ ಮಾಡಿಕೊಂಡು ಅವರು ಆಡತಕ್ಕ ಕೆಟ್ಟ ಮಾತುಗಳನ್ನು ಕೇಳಿ ನಮಗಂತೂ ಸಹನುವುದಕ್ಕಾಗುವುದಿಲ್ಲ, ಅಸಹ್ಯವಾಗುತ್ತದೆ. ಹೀಗಿರುವಾಗ ಒಂದು ಡಿಸ್ಟ್ರಿಕ್ಟ್‌ನಲ್ಲಿ ಪಾನನಿರೋಧ ಜಾರಿಗೆ ತಂದು ಪಕ್ಕದಲ್ಲೇ ಇರುವ ಮತ್ತೊಂದು ಡಿಸ್ಟ್ರಿಕ್ಟ್‌ನಲ್ಲಿ ತರದೇ ಇರುವುದು ಯಾವ ನೀತಿ? ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ, ಹಿಂದೆ ಬೇ ಜವಾಬ್ದಾರಿ ಸರ್ಕಾರ ಇದ್ದಾಗ 5 ನಿಮಿಷದಲ್ಲಿ ಸಂಪೂರ್ಣ ಪಾನನಿರೋಧ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಇಂದಿನವಾನ್ಯ ಅಧ್ಯಕ್ಷರಾಗಿರುವ ತಾವೂ ಕೂಡ ಹಿಂದೆ ಪ್ರಜಾಪ್ರತಿನಿಧಿ ಸಭೆಯ ಬಜೆಟ್ ಅಧಿವೇಶನದಲ್ಲಿ ಭಾಷಣ ಮಾಡುವಾಗ 5 ವರ್ಷದಲ್ಲಿ ನೀವು ಸಂಪೂರ್ಣ ಪಾನನಿರೋಧ ಮಾಡಬೇಕೆಂದಿದ್ದೀರಿ. ಆದರೆ ನಾವು 3 ವರ್ಷದಲ್ಲೇ ಮಾಡುತ್ತೇವೆ, ಏಕೆ ಸಾಧ್ಯವಾಗುವುದಿಲ್ಲ ಎಂದು ಕೇಳಿದ್ದೀರಿ. ಅಷ್ಟೆಲ್ಲಾ ಸುಮ್ಮನೆ ಮಾಡಲ್ಪಟ್ಟ ಭಾಷಣಗಳಾಗಿರುತ್ತವೆ. ಆದ್ದರಿಂದ ಈಗಲೂ ಸಹ ಪಾನನಿರೋಧವನ್ನು ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲೂ ತಕ್ಷಣ ಜಾರಿಗೆ ತರಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನೂ ಒಂದು ವಿಷಯವೇನೆಂದರೆ, ಪಾನನಿರೋಧ ಮಾಡುವುದರಿಂದ ಆಗತಕ್ಕ ನಷ್ಟವನ್ನೂ ಸರಿದೂಗಿಸುವುದಕ್ಕೆ ವ್ಯಾಪಾರದ ತೆರಿಗೆಯನ್ನು ಸಹಹಾಕಿದಿರಿ. ಪಾನನಿರೋಧ ಮಾಡುವುದರಿಂದ ಬಡಜನರಿಗೆ ಉಪಕಾರವಾಗುತ್ತದೆ ಎಂಬ ದೃಷ್ಟಿಯಿಂದ ಅದನ್ನು ಒಪ್ಪಿಕೊಂಡೆವು. ಅಷ್ಟೇ ಅಲ್ಲದೆ ಬಟ್ಟೆ ಮೇಲೆ ರೂಪಾಯಿಗೆ 4 ಆಣೆ ದರ ಸಹ ಹೆಚ್ಚಿಸಿದಿರಿ. ಅದನ್ನು ಸಹ ಒಪ್ಪಿಕೊಂಡೆವು. ಇಷ್ಟೆಲ್ಲಾ ಆದರೂ ಕೂಡ ಕುಡಿಯುವವರು ಕುಡಿಯುತ್ತಲೇ ಇದ್ದಾರೆ, 1½ ಕೋಟಿ ರೂಪಾಯಿ ವರಮಾನ ಇದ್ದುದು 4 ಕೋಟಿ ರೂಪಾಯಿ ಬಂದರೂ ಸಹ ತೆರಿಗೆ ಕೊಡುವುದು ಮಾತ್ರ ತಪ್ಪಲಿಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾಲ್ಕು ಕೋಟಿ ರೂಪಾಯಿ ವರಮಾನ ಎಲ್ಲಿ ಬಂದಿದೆ?

ಶ್ರೀ ಬಿ. ಚೆನ್ನಬೈರೇಗೌಡರು.—ಬಟ್ಟೆ ಮೇಲೆ ನಾಲ್ಕು ಆಣೆ ತೆರಿಗೆ ಹಾಕಿದಿರಿ. ಅದೆಲ್ಲಾ ಸೇರಿಸಿದರೆ ನಾಲ್ಕು ಕೋಟಿ ರೂಪಾಯಿ ಆಗುತ್ತದೆ. ಹೀಗೆ ಅನೇಕ ತೆರಿಗೆಗಳನ್ನು ಹೊರಿಸಿದರೂ ಈ ಹೇಯವಾದ ಪ್ರವೃತ್ತಿ ಹೋಗಬೇಕೆಂದು ಸರ್ವಸಮ್ಮತವಾಗಿ ಅದನ್ನು ಒಪ್ಪಿಕೊಂಡೆವು. ಇದು ಯಶಸ್ವಿಯಾಗಿ ನೆರವೇರದಿದ್ದರೆ ಏನು ಪ್ರಯೋಜನ ಎಂಬುದನ್ನು ಯೋಚನೆ ಮಾಡಬೇಕು

---

*This Assembly is of the opinion that prohibition be introduced in the Hassan District from the year 1951-52.

ಆದ್ದರಿಂದ ಪಾನನಿರೋಧವನ್ನು ಕೂಡಲೇ ಸಂಪೂರ್ಣವಾಗಿ ಸಂಸ್ಥಾನಾಮಳೆ ಜಾರಿಗೆ ತರಬೇಕೆಂದು ಹೇಳಿ, ಈ ತಿದ್ದುಪಡಿಯನ್ನು ಮಾನ್ಯ ಸದಸ್ಯರೆಲ್ಲರೂ ಸರ್ವಾನುಮತದಿಂದ ಅಂಗೀಕರಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟಿಯವರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ಶ್ರೀ ಬೋರಣ್ಣಗೌಡರು ತಂದಿರತಕ್ಕ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ನಾನೂ ಸಹ ಇದೇ ರೀತಿಯ ಒಂದು ನಿರ್ಣಯವನ್ನು ಕಳುಹಿಸಿದ್ದೇನೆ; 23ನೆಯ ನಂಬರಿನ ನಿರ್ಣಯವಾಗಿ ಅದು ಇಲ್ಲಿ ನಮೂದಾಗಿದೆ.

ಕಳೆದ ವರ್ಷ ಇದೇ ನಿರ್ಣಯ ಬಂದಿದ್ದಾಗ್ಗೆ ಮಾನ್ಯ ಸರ್ಕಾರದವರು ಮುಂದಿನ ವರ್ಷ ಮಾಡೋಣ. ಈಗ ಬಜೆಟ್ಟಿಲ್ಲಾ ತಯಾರಾಗಿ ಬಿಟ್ಟಿದೆ ಎಂದು ಹೇಳಿದ್ದರಿ. ಈಗ ಅದೇ ಪ್ರಕಾರ ಸರ್ಕಾರದಲ್ಲಿ ಈ ವಿಷಯ ಸಭೆಯ ಮುಂದೆ ಬಂದಿದೆ. ದಯವಿಟ್ಟು ಮುಂದಿನವರ್ಷವಾದರೂ ಜಾರಿಗೆ ತರುವ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಶ್ರೀ ಬೋರಣ್ಣಗೌಡರು ನಿರ್ಣಯವನ್ನು ಸಭೆಯ ಮುಂದಿಡುತ್ತಾ ಎಲ್ಲಾ ವಿಷಯಗಳನ್ನೂ ಸ್ಪಷ್ಟವಾಗಿ ವಿವರಿಸಿದ್ದಾರೆ. ಸೇಲ್ಸ್‌ಟಾಕ್ಸ್ ಹಾಕುವಾಗ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹಾಕುತ್ತಿದ್ದೇವೆಂದು ಭರವಸೆಕೊಟ್ಟಿರಿ. ಅದರಂತೆ ಪಾನನಿರೋಧವನ್ನು ಪ್ರಾರಂಭಿಸಿ ಈಗಾಗಲೇ 5 ಡಿಸ್ಟ್ರಿಕ್ಟ್‌ಗಳಲ್ಲಿ ಜಾರಿ ಮಾಡಿದ್ದೀರಿ. ಇದನ್ನು ಮಿಕ್ಕ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ವಿಸ್ತರಿಸಬೇಕೆಂಬ ಶ್ರೀ ಬಿ ಹುಚ್ಚೇಗೌಡರ ತಿದ್ದುಪಡಿಯೂ ಸಾಧುವಾದುದೇ. ಅದರ ವಿಚಾರದಲ್ಲಿ ನಮಗೂ ಸಹಾನುಭೂತಿಯಿದೆ. ಆದರೆ ಅವರ ಕೇಳುವಂತೆ ಎಲ್ಲಾ ಡಿಸ್ಟ್ರಿಕ್ಟ್‌ಗೂ ಒಂದೇ ಸಾರಿ ಜಾರಿ ಮಾಡುವುದು ಕಾರ್ಯತಃ ಸಾಧ್ಯವಿಲ್ಲದ್ದು ಎಂದು ಭಾವಿಸಿ ಸಧ್ಯಕ್ಕೆ ಹಾಸನ ಡಿಸ್ಟ್ರಿಕ್ಟಿನಲ್ಲಿ ತರಲೆಂದು ಸೂಚಿಸಿದ್ದೇವೆ. ನ್ಯಾಯವಾಗಿ ಈಗ್ಗೆ ಎರಡು ವರ್ಷಗಳ ಹಿಂದೆಯೇ ಇದಲ್ಲಿ ಜಾರಿಗೆ ಬರಬೇಕಾಗಿತ್ತು. ಕಾರಣ ಇಷ್ಟೆ. ಇತ್ತ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಅತ್ತ ಕಡೂರು ಡಿಸ್ಟ್ರಿಕ್ಟಿನಲ್ಲಿ ಜಾರಿಯಲ್ಲದ್ದು ಮಧ್ಯೆಯಿರುವ ಹಾಸನ ಡಿಸ್ಟ್ರಿಕ್ಟಿನಲ್ಲಿ ಜಾರಿಗೆ ತರದಿರುವುದು ನ್ಯಾಯವಲ್ಲ. ಆಲ್ಲದೆ ಯಾವುದೇ ದೃಷ್ಟಿಯಲ್ಲಿ ನೋಡಲಿ, ಹಾಸನ ಡಿಸ್ಟ್ರಿಕ್ಟಿನಲ್ಲಿ ಜಾರಿಗೆ ತರಬೇಕಾದ್ದು ಅಗತ್ಯ. ಅದರಲ್ಲೂ ಮಹಾತ್ಮಾಗಾಂಧಿಯವರ ಸಾನ್ನಿಧ್ಯದಲ್ಲಿ ಬಹುಕಾಲಇದ್ದ ನಮ್ಮ ಹಣಕಾಸಿನ ನಚವರಿಗಂತೂ ಮಹಾತ್ಮಾಗಾಂಧಿಯವರಿಗೆ ಪ್ರೀತಿಪಾತ್ರವಾಗಿದ್ದಂಥ ಈ ಪಾನನಿರೋಧ ಕಾರ್ಯಕ್ರಮವನ್ನು ಕೈಕೊಳ್ಳಬೇಕಾದ್ದು ತಮ್ಮ ಪ್ರಥಮ ಕರ್ತವ್ಯವೆಂಬ ಭಾವನೆಯಿರಬೇಕು. ಆದ್ದರಿಂದ ಅವರು ದೊಡ್ಡ ಮನಸ್ಸು ಮಾಡಿ ಮುಂದಿನ ಬಜೆಟ್ಟಿನಲ್ಲಿ ಇದಕ್ಕೆ ಅವಕಾಶ ಮಾಡಿ ಜಾರಿಗೆ ತರುವುದಕ್ಕೆ ಪ್ರಯತ್ನಪಡುತ್ತಾರೆಂದು ತಿಳಿದಿದ್ದೇನೆ. ಸಾವಿರಾರು ಬಡ ಜನರು ಇದರಿಂದ ಸಂತೋಷಪಡುತ್ತಾರೆ. ಜನರ ನೈತಿಕ ಮಟ್ಟವನ್ನು ಉತ್ತಮಪಡಿಸುವುದಕ್ಕೆ ಇದೊಂದು ಒಳ್ಳೆಯ ಮಾರ್ಗ. ಆದ್ದರಿಂದ ದಯಮಾಡಿ ಇದನ್ನು ಕಾರ್ಯರೂಪಕ್ಕೆ ತಂದರೆ ಅವರಿಗೂ ಕೀರ್ತಿ ಬರುತ್ತದೆ. ಕಾಂಗ್ರೆಸ್ಸಿನವರು ಏನೇನು ಹೇಳುತ್ತಿದ್ದರೋ ಅದನ್ನು ಅಕ್ಷರಶಃ ಪಾಲಿಸಿದ್ದಾರೆಂದು ಜನರಿಗೆ ತಮ್ಮ ಮಾತಿನಲ್ಲಿ ನಂಬಿಕೆಗೌರವ ಹುಟ್ಟುತ್ತದೆ. ಆದ್ದರಿಂದ ಸರ್ಕಾರದವರು ಖಂಡಿತ ಈ ಸಾಲಿನಲ್ಲಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ಈ ನಿರ್ಣಯಕ್ಕೆ ಪೂರ್ಣಬೆಂಬಲ ಕೊಡುತ್ತೇನೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಶ್ರೀ ಹುಚ್ಚೇಗೌಡರು ಈ ಮೂಲ ನಿರ್ಣಯಕ್ಕೆ ತಂದಿರತಕ್ಕ ತಿದ್ದುಪಡಿಯನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ ಈಗ ತಾನೇ ಕೆಲವು ಕಾಲದ ಹಿಂದೆ ಪಾನನಿರೋಧವನ್ನು ನಮ್ಮ ದೇಶದ ಕೆಲವು ಭಾಗಗಳಲ್ಲಿ ಆಚರಣೆಗೆ ತಂದಿದ್ದೀರಿ. ಇದನ್ನು ತಂದಿದರ ಉದ್ದೇಶ, ಜನರ ನೀತಿಗೆಡಿಸುವ ಈ ದುರ್ವ್ಯಾಪಾರವನ್ನು ತಪ್ಪಿಸಬೇಕು, ಸರ್ಕಾರದವರು ಈ ಅನೀತಿಯುತವಾದ ಮಾರ್ಗದಿಂದ ವರಮಾನವನ್ನು ಸಂಪಾದಿಸುವುದೂ ಶ್ರೇಯಸ್ಕರವಲ್ಲ, ಆದ್ದರಿಂದ ಹೇಗಾದರೂ ಮಾಡಿ ಜನರ ಕುಡಿತ ತಪ್ಪಿಸಿ ಅವರ ನೈತಿಕ ಮಟ್ಟವನ್ನು ಉತ್ತಮಪಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು. ಈ ಪ್ರಕಾರ ತಂದ ನಂತರ ಅದು ಎಷ್ಟರಮಟ್ಟಿಗೆ ಕೆಲಸಮಾಡಿದೆ, ನಮ್ಮ ಕಾರ್ಯಕ್ರಮ ಯಶಸ್ವಿಯಾಗಿದೆಯೇ ಇಲ್ಲವೇ, ನಿಜವಾಗಿಯೂ ಕುಡಿತ ಕಡಿಮೆಯಾಗುತ್ತಿದೆಯೇ ಇಲ್ಲವೇ, ಇದರ ಪರಿಣಾಮವಾಗಿ ನಮಗೆ ಬರುತ್ತಿದ್ದ ವರಮಾನ ಎಷ್ಟು ಕಡಿಮೆಯಾಗಿದೆಯೆಂಬುದನ್ನು ವಿಮರ್ಶಮಾಡತಕ್ಕ ಕಾಲ ಈಗ ಬಂದಿದೆ. ನಾವು ಆತುರ ಆತುರವಾಗಿ ಏನನ್ನೂ ತೀರ್ಮಾನ ಮಾಡುವ ಕಾಲ ಇದಲ್ಲ. ನಾವು ಏನೊಂದು ಮುಂದಿನ ಹೆಜ್ಜೆಯನ್ನು ಕೈಕೊಳ್ಳುವುದಕ್ಕೆ ಮುಂಚೆ ಕೂಲಂಕಷವಾಗಿ ಪರ್ಯಾಲೋಚಿಸಿ ಇಷ್ಟು ಕಾಲ ಪಾನನಿರೋಧ ಜಾರಿಯಲ್ಲಿದ್ದುದರಿಂದ ಕುಡಿತವೇನಾದರೂ ಕಡಿಮೆಯಾಗಿದೆಯೇ! ನಮ್ಮ ಪಾನನಿರೋಧದ ನೀತಿ ಸರಿಯಾಗಿದೆಯೇ ಎಂಬುದನ್ನು ನೋಡಬೇಕು. ಈಗ ವಾಸ್ತವಿಕವಾಗಿ ನೋಡುವುದಾದರೆ ಕುಡಿಯುವವರ ಸಂಖ್ಯೆ ಜಾಸ್ತಿಯಾಗಿರುವಂತೆ ಕಂಡುಬರುತ್ತದೆ.

ಒಬ್ಬ ಸದಸ್ಯರು.—ಕುಡಿತ ಜಾಸ್ತಿಯಾಗಿದೆಯೆ!!

ಶ್ರೀ ಜಿ ವೀರಪ್ಪನವರು.—ಅದು ನನ್ನ ಅಭಿಪ್ರಾಯ. ಅನೇಕರು ಗೃಹಕೈಗಾರಿಕೆಯ ರೂಪದಲ್ಲಿ ಕಳ್ಳಬಟ್ಟಿ ಇಳಿಸುವುದನ್ನೇ ಇಟ್ಟುಕೊಂಡು ನಡೆಸುತ್ತಿದ್ದಾರೆ; ಕಾನೂನೋಲ್ಲಂಘನೆ ಜಾಸ್ತಿಯಾಗುತ್ತಿದೆ. ನಮ್ಮ ನಿರೀಕ್ಷಣೆಗೆ ವ್ಯತಿರಿಕ್ತವಾಗಿ ಜನರ ನೈತಿಕ ಮಟ್ಟವು ಕಡಿಮೆಯಾಗುತ್ತಿದೆ. ಅಲ್ಲದೆ ಎಷ್ಟೋ ವೇಳೆ ಅನೇಕ ಹಾನಿಕರವಾದ ದ್ರವ್ಯಕಗಳನ್ನೇ ಪಾನಕ್ಕೆ ಬದಲಾಗಿ ಕುಡಿಯುವುದಕ್ಕೆ ಪ್ರಾರಂಭಿಸಿ ಎಷ್ಟೋ ಜನ ಪ್ರಾಣಹಾನಿ ಮಾಡಿಕೊಂಡಿರುವುದನ್ನೂ ನೋಡುತ್ತಿದ್ದೇವೆ. ಇದನ್ನೆಲ್ಲಾ ಹೇಳಿದ ಮಾತ್ರದಿಂದ ನಾನು ಪಾನನಿರೋಧ ನೀತಿಯನ್ನು ವಿರೋಧಿಸುತ್ತಿದ್ದೇನೆಂದು ಭಾವಿಸಬಾರದು. ಪಾನನಿರೋಧವನ್ನು ಜಾರಿಗೆ ತರುವುದು ಒಂದು ಮಹತ್ವದ ಸಾಧನೆಯೇ ಸರಿ. ಆದರೆ, ಈ ಕೆಟ್ಟಪದ್ಧತಿ ಅನೇಕ ವರ್ಷಗಳಿಂದ ನಮ್ಮಲ್ಲಿ ಆಳವಾಗಿ ಬೇರೂರಿರುವಂಥದನ್ನು ನಿವಾರಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಕೇವಲ ಕೂಲಿಗಾರರಿಗೆ ಅನುಕೂಲ ಮಾಡುವುದಕ್ಕೆ ಇದನ್ನು ಮಾಡುತ್ತಿದ್ದೇವೆಂದು ಭಾವನೆಯಿತ್ತು. ಆದರೆ ವಾಸ್ತವಿಕವಾಗಿ ನೋಡಿದರೆ ಇದು ಅಷ್ಟು ಸುಲಭವಾಗಿ ಹೋಗುವುದಿಲ್ಲ. ಈಗಿನ್ನೂ ಇದನ್ನು ತಡೆಗಟ್ಟಲಿಕ್ಕೆ ಹೆಚ್ಚಿಗೆ ಪ್ರಯತ್ನ ಮಾಡಿಲ್ಲವೆಂದೇ ಹೇಳಬೇಕು. ಸರಿಯಾಗಿ enforce ಮಾಡಿಲ್ಲ. ಇನ್ನೂ ಇದಕ್ಕಾಗಿ ಬಹಳ ಮಟ್ಟಿಗೆ ಪೋಲೀಸ್ ಸಿಬ್ಬಂದಿಯನ್ನಿಟ್ಟುಕೊಂಡು ಕೆಲಸ ಮಾಡಬೇಕು. ಇರುವ ಕೆಲಸವನ್ನು ಮಾಡುವುದಕ್ಕೆ ಪೋಲೀಸ್ ಸಿಬ್ಬಂದಿ ಸಾಲದೆಂದು ಹೇಳುತ್ತಾರೆ. ಅಂಥಾದ್ದರಲ್ಲಿ ಇದಕ್ಕಾಗಿ ಹೆಚ್ಚಿಗೆ ಪೋಲೀಸ್ ಸಿಬ್ಬಂದಿಯನ್ನೇನೂ ಏರ್ಪಡಿಸಿಲ್ಲ: ಸುಮ್ಮನೆ ಇರುವುದರಲ್ಲೇ ಮಾಡಿ ಎಂದು ಹೇಳಿ ಯಶಸ್ವಿಯಾಗಿ ನಡೆಸದೆ ಇದ್ದರೆ ಪಾನ ನಿರೋಧವನ್ನು ಜಾರಿ

(ಶ್ರೀ ಜಿ. ವೀರಪ್ಪನವರು)

ಗೆ ತಂದು ಪ್ರಯೋಜನವಾಗಲಲ್ಲವೆಂದು ಭಾವಿಸುವುದು ಸರಿಯಲ್ಲ. ಈ ರೀತಿಯಲ್ಲಿ ಸರಿಯಾಗಿ enforce ಮಾಡದೆ ಜನರು ಹಾನಿಕರವಾದ ಇತರೇ ದ್ರಾವಕಗಳನ್ನು ಕುಡಿಯುವುದಕ್ಕೆ ಎಡೆಕೊಡುವ ಬದಲು ಕುಡಿಯುವುದಕ್ಕೆ ಬಿಡುವುದೇ ಅಷ್ಟು ಕೆಡುಕಲ್ಲವೆಂದು ಹೇಳುತ್ತೇನೆ. ಫೋಲೀಸಿನವರಿಗೆ ಲಂಚ ಕೊಟ್ಟು ಅಲ್ಲಿಂದ ಹೆಂಡತರಿಸಿ ಕುಡಿದು ಜನ ಹಾಳಾಗುತ್ತಿದ್ದಾರೆ. ಪರಿಣಾಮದಲ್ಲಿ ಒಂದು ಕಡೆ ಲಂಚ ಜಾಸ್ತಿಯಾಗುತ್ತಿದೆ; ಇನ್ನೊಂದು ಕಡೆ ಅನಾರೋಗ್ಯಕರವಾದ ಕುಡಿತಗಳು ಹೆಚ್ಚಾಗುತ್ತಿವೆ. ಆದ್ದರಿಂದ ನಾನು/ ಸರ್ಕಾರದವರಿಗೆ ಹೇಳುವುದಿಷ್ಟೆ. ಬರೀ ತತ್ಪಕ್ಕಂಟಿಕೊಂಡು ಕುಡಿತವನ್ನು ಬಿಡಿಸಬೇಕೆಂದು ಕಾನೂನು ಮಾಡುವುದಕ್ಕೆ ಬದಲು ನಾವು ಇಂಥ ಪಾನನಿರೋಧ ಕಾನೂನನ್ನಿಟ್ಟುಕೊಳ್ಳಬೇಕಾದರೆ ಅದನ್ನು ನಾವೀಗ ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಹಾಗಿದ್ದರೆ ಇಟ್ಟುಕೊಳ್ಳೋಣ. ಮಹಾತ್ಮಾಗಾಂಧಿಯವರು ಹೇಳುತ್ತಿದ್ದುದೇನೋ ನಿಜ, ಅವರ ಮಾತಿಗನುಗುಣವಾಗಿಯೇ ಕಾಂಗ್ರೆಸ್ಸಿನವರು ಕ್ರಮೇಣ ಇಡೀ ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರುತ್ತಿದ್ದಾರೆ. ಈಗಿನ ಸಮಯದಲ್ಲಿ ಇದನ್ನು ಮುಂದುವರಿಸುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕು.

ಅಧ್ಯಕ್ಷರು.—ನಿರ್ಣಯವನ್ನೇ ವಿರೋಧಿಸುವಂತೆ ಮಾತನಾಡುತ್ತಿದ್ದೀರಲ್ಲಾ!

ಶ್ರೀ ಜಿ. ವೀರಪ್ಪನವರು.—ಶ್ರೀ ಹುಚ್ಚೇಗೌಡರು ಕೇವಲ ಹಾಸನ ಡಿಸ್ಟ್ರಿಕ್ಟಿನಲ್ಲಲ್ಲ, ಇಡೀ ದೇಶದಲ್ಲೆಲ್ಲಾ ಒಟ್ಟಿಗೆ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಅದನ್ನು ವಿರೋಧಿಸುತ್ತಿದ್ದೇನೆ. ಎಲ್ಲಾ ಕಡೆಯಲ್ಲೂ ಜಾರಿ ಮಾಡುವುದಕ್ಕೆ ಸೌಧ್ಯವಿಲ್ಲ.

ಮುಷೀರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂ ರವರು (ಚಿತ್ರದುರ್ಗ ಮತ್ತು ತುಮಕೂರು-ಮುಸ್ಲಿಂ).—ಹಾಗಿದ್ದರೆ ನಾವು ಮೊನ್ನೇ ಇದೇ ವಿಚಾರವನ್ನು ಹೇಳಿದಾಗ ಅದನ್ನೇಕೆ ವಿರೋಧಿಸಿದಿರಿ?

ಶ್ರೀ ಜಿ. ವೀರಪ್ಪನವರು.— I never spoke on that.

ಈ ನಿರ್ಣಯದ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವುದಾದರೆ, ನಾನೇನೂ ಪಾನನಿರೋಧಕ್ಕೆ ವಿರೋಧಿಯಲ್ಲ, ಆದರೆ ಅದನ್ನು ಜಾರಿಗೆ ತರುವುದಕ್ಕೆ ಹೊರಟಮೇಲೆ ನೀವು ಮಾಡುವ ಪ್ರಯತ್ನವನ್ನು ಪೂರ್ಣ ಮನಸ್ಸಿನಿಂದ ಮಾಡಬೇಕು. ಹಾಗೆ ಮಾಡುವುದಕ್ಕಾಗದೆ ಇದ್ದರೆ ಬಿಟ್ಟು ಬಿಡುವುದು ಲೇಸು. ಈಗ ಪಾನನಿರೋಧ ಜಾರಿಗೆ ತಂದಿರುವುದರಿಂದ ಬಹಳ ಜನರಿಗೇನೋ ಅನುಕೂಲವಾಗಿದೆ. ಆದರೆ ಪೂರ್ಣವಾಗಿ ನಾವು ನಡೆಸುವುದಕ್ಕಾಗುವುದಿಲ್ಲ. ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು. ಈಗ ಕೇಂದ್ರ ಸರ್ಕಾರದವರೂ ಈ ವಿಷಯದಲ್ಲಿ ಅಷ್ಟಾಗಿ ಹೆಚ್ಚಿಗೆ ಆಸಕ್ತಿಯಿಟ್ಟಿಲ್ಲ. ನಮ್ಮಕ್ಕೆ ಸ್ವಲ್ಪ ಮಟ್ಟಿಗೆ ನಿಧಾನಮಾಡುವುದು ಕಾರ್ಯೋಚಿತವೆಂದು ಅಭಿಪ್ರಾಯ ಪಟ್ಟಿದ್ದಾರೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ) —ಯಾವತ್ತು ಜಾಗ್ರತೆ ಹೋಗಿ ಎಂದು ಹೇಳಿದ್ದಾರೆ!!

ಶ್ರೀ ಜಿ. ವೀರಪ್ಪನವರು.—ಅಂತೂ ಹಿಂದಿನ ಆಸಕ್ತಿ, ಹುರುಪಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ಈಗ್ಗೆ ಎಷ್ಟು ಡಿಸ್ಟ್ರಿಕ್ಟುಗಳಲ್ಲಿ ನಡೆಸುತ್ತಿದ್ದಾರೋ ಅಷ್ಟನ್ನೇ ಇಟ್ಟುಕೊಂಡು ಇನ್ನೂ ಯಶಸ್ವಿಯಾಗಿ ನಡೆಸುವುದಕ್ಕೆ ಪ್ರಯತ್ನ ಮಾಡಿ. ಸಾಧ್ಯವಿದ್ದರೆ ಇನ್ನೂ ಸ್ವಲ್ಪ ಮುಂದೆ ಹೋಗಿ ಹಾಸನ ಡಿಸ್ಟ್ರಿಕ್ಟನ್ನೂ ಸೇರಿಸಿಕೊಳ್ಳಿ. ಹಾಗಿಲ್ಲದೆ ಎಲ್ಲಾ ಡಿಸ್ಟ್ರಿಕ್ಟ್ ಗಳಲ್ಲೂ ಜಾರಿಗೆ ತಂದು ಆ ಮೇಲೆ ತಡಕಾಡುವುದಕ್ಕೆ ಹೊರಡುವುದು ಸರಿಯಲ್ಲ. ದೇಶದಲ್ಲಿ ಈಗ ಅನೇಕ ಕಷ್ಟಗಳಿವೆ. ಆದ್ದರಿಂದ ನಮ್ಮನ್ನೆ ಹೆಚ್ಚಿಗೆ ಮಾಡಿಕೊಂಡು ಹೋಗುವುದಕ್ಕೆ ಬದಲು ಇರುವಷ್ಟೇ ಇದ್ದರೆ ಸಾಕೆಂದು ನನ್ನ ಅಭಿಪ್ರಾಯ.

*ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ). —ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಮಾತನಾಡುವಾಗ ನನಗೇಕೋ ವ್ಯಸನವಾಗುತ್ತಿದೆ. ಏನೆಂದರೆ, ಈ ಕಾಲದಲ್ಲಿ ಪಾನನಿರೋಧ ಇರಬೇಕೇ ಇರಬೇಡವೇ ಎಂಬ ಪ್ರಶ್ನೆ ಬಂತಲ್ಲಾ ಎಂದು ವ್ಯಸನ. ಈ ಮಧ್ಯೆ ಕೇಂದ್ರದವರ ನೀತಿಯ ವಿಷಯ ಬೇರೆ ಪ್ರಸ್ತಾಪಕ್ಕೆ ಬಂತು. ನನಗನ್ನಿಸುತ್ತದೆ, ಕೇಂದ್ರ ಹೇಳಿದ್ದೆಲ್ಲಾ ಮಾಡಲೇಬೇಕೆಂದು ಎಲ್ಲೂ ವೇದವಾಕ್ಯವಿದೆಯೋ ಗೊತ್ತಿಲ್ಲ. ಆ ರೀತಿ ಅವರು ನಮ್ಮ ಸರ್ಕಾರದವರಿಗೆ ಹೇಳಿದ್ದರೆ ಅದು ನಿಜವಾಗಿಯೂ ವ್ಯಸನಕರವಾದ ನೀತಿಯೆಂದು ಹೇಳುತ್ತೇನೆ. ಹೀಗೆಲ್ಲಾ ಅವರು ಹೇಳಿದ್ದನ್ನೇ ನಾವಿಲ್ಲಿ ಮಾಡಬೇಕೆಂದರೆ ಇಲ್ಲಿ ಮಂತ್ರಿಗಳೇಕೆ? ನಾವೇಕೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ ಹೇಳಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಮಧ್ಯ ಪ್ರದೇಶದ ಸರ್ಕಾರದವರು ಈ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಿ ಪಾನನಿರೋಧ ಯಾವ ರೀತಿ ಕೆಲಸ ಮಾಡುತ್ತಿದೆಯೇ, ದೇಶಕ್ಕೆ ಅದರಿಂದ ನಿಜವಾಗಿಯೂ ಒಳ್ಳೆಯದಾಗಿದೆಯೇ ಎಂಬುದನ್ನು ಪರೀಕ್ಷಿಸುತ್ತಿದ್ದಾರೆ. ಅದೇ ರೀತಿ ನಾವು ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.— ನಾವೂ ಹಾಗೇ ತಿಳಿದುಕೊಳ್ಳಬಹುದು. ಅದಿರಲಿ, ಅಲ್ಲಿಲ್ಲಕ್ಕಿಂತ ಹೆಚ್ಚಾಗಿ ನಮ್ಮ ಮೈಸೂರು ಸರ್ಕಾರದವರು ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ! ಅತ್ತಕಡೆ ಮದ್ರಾಸ್ ಸರ್ಕಾರದವರು ಬೊಂಬಾಯಿ ಸರ್ಕಾರದವರು ಒಂದು ರೀತಿ ಮಾಡುತ್ತಿದ್ದಾರೆ, ಇಂಡಿಯಾದೇಶದ ಇತರೇ ಸರ್ಕಾರದವರು ಒಂದು ರೀತಿ ಮಾಡುತ್ತಿದ್ದಾರೆ. ಈ ಮಧ್ಯೆ ನಮ್ಮ ಮೈಸೂರು ಸರ್ಕಾರದವರು ಕೇಂದ್ರದವರ ಕೈಕೆಳಗೆ ಸಿಕ್ಕಿಹಾಕಿಕೊಂಡಿರುವ ವಿಚಾರ ನನಗರ್ಥವಾಗುವುದಿಲ್ಲ. ಮಾತೆತ್ತಿದರೆ ನಮ್ಮ ದಾನಪ್ಪನವರು ಕಠಿಣವಾಗಿ ಹೇಳುತ್ತಿದ್ದೇವೆಂದು ಹೇಳುತ್ತಿರುತ್ತಾರೆ. ಹಾಗಿರುವಾಗ ಅದೇಕೆ ಈ ಅರ್ಧನಾರೀಶ್ವರ ವೇಷವೋ; ಕಾಣೆ, ಈ ಕಡೆ ಬೊಂಬಾಯಿ ಮದ್ರಾಸಿನವರನ್ನಾದರೂ ನೋಡಿಕೊಳ್ಳಿ. ಇಲ್ಲದಿದ್ದರೆ ಪೂರ್ತಿ ಹಿಂದಕ್ಕೆಹೋಗಿಬಿಡಿ. ಈಗ ನಾನು ಹೇಳುವುದಿಷ್ಟೆ—ಈ ಮೊದಲೇ ನೀವು ಈಬಗ್ಗೆ ಕೈಗೊಂಡ ನೀತಿ ಸರಿಯಾಗಿಲ್ಲ. ಆದರೆ ನಿಮ್ಮ ಉದ್ದೇಶವೇನೋ ಒಳ್ಳೆಯದೆ. ಮೊದಲು ನೀವು ಜನರಿಗೆ ಒಳ್ಳೆಯದನ್ನು ಮಾಡಿ, ಅವರೆಲ್ಲರನ್ನೂ ಕೃತಾರ್ಥರನ್ನಾಗಿ ಮಾಡಿದ ಮೇಲೆ ನಮಗೆ ಖಂಡಿತ ಒಳ್ಳೆಯ ಹೆಸರೂ, ಕೀರ್ತಿ ಬಂದೇ ಬರುತ್ತದೆಯೇ ಎಂಬ ಈ ಅಂಶಗಳನ್ನೆಲ್ಲಾ ನೀವು ಆಲೋಚನೆ ಮಾಡಿ ಈ ಪಾನನಿರೋಧವನ್ನು ಜಾರಿಗೆ ತರಬೇಕಾಗಿತ್ತು. ಆದರೆ ನೀವೀಗ ಈ ಕುಡಿತ ನಿಲ್ಲಿಸತಕ್ಕ ಬಗ್ಗೆ ಕೈಗೊಂಡಿರುವ ಕಾರ್ಯಾಚರಣೆಯಲ್ಲಿ ಅದಿನ್ನೂ ಜಾಸ್ತಿಯಾಗುತ್ತಿದೆ. ಈಗ ತಾವು ಹಾಸನ ಜಿಲ್ಲೆಯಲ್ಲಿ ಕುಡಿತಕ್ಕೆ ಅವಕಾಶ ಕಲ್ಪಿಸಿ, ಪಕ್ಕದ ಜಿಲ್ಲೆಯಾದ ಚಿತ್ರದುರ್ಗದಲ್ಲಿ ಕುಡಿತವಾಡತಕ್ಕದ್ದು ಕಾನೂ

ನಿಗೆ ವಿರೋಧವೆಂದು ಜನರು ಬಿಟ್ಟುಬಿಡುತ್ತಾರೇನು? ಆದರೆ ನೀವು ಹೇಳಬಹುದು, ಹಾಗೆ ಒಂದೇ ಸಾರಿಗೆ ದೇಶಾದ್ಯಂತವೂ ಇದನ್ನು ಜಾರಿಗೆ ತಂದರೆ ಸರ್ಕಾರದ ವರಮಾನ ಕಮ್ಮಿಯಾಗುತ್ತದೆ ಎಂದು. ಆದರೆ ಆ ನಿಮ್ಮ ನೀತಿಯನ್ನು ನೋಡಿದರೆ ನಿಮ್ಮ ವರಮಾನಕ್ಕೋಸ್ಕರ ನೀವೇ ಜನರಿಗೆ ಕುಡಿಯತಕ್ಕ ಬಗ್ಗೆ ಪ್ರೋತ್ಸಾಹ ನೀಡುತ್ತಿದ್ದಂತೆ ಭಾಸವಾಗುತ್ತದೆ. ಹೀಗೆಲ್ಲಾ ಮಾಡಿದರೆ ಈ ಕುಡಿತವನ್ನು ಖಂಡಿತ ನಿಲ್ಲಿಸುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ಹಣಕ್ಕಾಸಿನ ಮುಗ್ಗಟ್ಟುಂಟಾದರೆ ಅದನ್ನು ನಿವಾರಿಸುವ ಶಕ್ತಿ ಅವರಿಗೆ ಇಲ್ಲವೇನು? ಆ ಬಗ್ಗೆ ನೀವು ತೀರ್ಪ ಕಾರ್ಯಕ್ರಮವನ್ನು ಕೈಗೊಂಡರೆ ಏಕಾಗುವುದಿಲ್ಲ? ನೀವು ಧೈರ್ಯದಿಂದ ಕೆಲಸ ಮಾಡಬೇಕು. ಇಡೀ ಸಂಸ್ಥಾನದಲ್ಲೇ ಜಾರಿಗೆ ತನ್ನಿ. ಹಾಗಿಲ್ಲದೆ ಅರ್ಧಭಾಗದಲ್ಲಿ ಜಾರಿಗೆ ತರುವುದು, ಇನ್ನರ್ಧ ಭಾಗದಲ್ಲಿ ಹಾಗೆ ಬಿಡುವುದು, ಸರಿಯಾದುದಲ್ಲ. ಈ ವಿಚಾರವಾಗಿ ನಾನಂತೂ ಪದೇ ಪದೇ ಹೇಳಿ, ನನಗೇ ಬೇಡವಾರಾಗಿ ಹೋಗಿದೆ. ನಿಮ್ಮ ಆಡಳಿತದ ವೈಖರಿಯೇ ಒಂದು ತರಹ ಆಗಿ ಇಡೀ ದೇಶದ ಜನರಿಗೇ ಬಹಳ ಬೇಜಾರು ಬಂದು ಹೋಗಿದೆ. ಈಗ ಈ ಹಾಸನ ಜಿಲ್ಲೆಯಲ್ಲಿ ಇನ್ನೂ ಪಾನನಿರೋಧವನ್ನು ಜಾರಿಗೆ ತಾರದಿರುವ ಸಂದರ್ಭದಲ್ಲಿ ಈಗ ಬಂದಿರುವ ನಿರ್ಣಯಕ್ಕೆ ಶ್ರೀ ಬಿ. ಹುಚ್ಚೇಗೌಡರು ತಂದಿರುವ ತಿದ್ದುಪಡಿಯು ಬಹಳ ಸೂಕ್ತವಾಗಿದೆ, ಅದಕ್ಕೆ ನಾನು ಖಂಡಿತ ಬೆಂಬಲ ನೀಡತಕ್ಕವನಿದ್ದೇನೆ. ಇದಲ್ಲ ನಿಮ್ಮ ಜವಾಬ್ದಾರಿ. You have committed yourselves. It would be a great sin on the part of those who are responsible, to go back on this policy of prohibition. ಮೊದಲಿನಿಂದಲೂ ನಾನು ಇದನ್ನು ಹೇಳುತ್ತಲೇ ಇದ್ದೇನೆ. ತಾವು ಇನ್ನೂ ಒಂದು ವಿಚಾರ ಹೇಳುತ್ತೀರಿ. ನಮಗೆ ಕೇಂದ್ರದವರು, ಈ ವಿಚಾರದಲ್ಲಿ ಬಹಳ ಜಾಗರೂಕರಾಗಿರಬೇಕೆಂದೂ, ಬಹಳ ಎಚ್ಚರಿಕೆಯಿಂದ ವರ್ತಿಸಬೇಕೆಂದೂ, ನಿಧಾನವಾಗಿ ಇದನ್ನು ಮುಂದುವರಿಸಬೇಕೆಂದೂ, ಸೂಚನೆ ಕೊಟ್ಟಿದ್ದಾರೆ, ಅದುದರಿಂದ ನಾವು ಅವರ ಮಾತಿಗೆ ಬೆಲೆ ಕೊಡಬೇಕಾಗಿದೆ ಎಂದು. ಹಾಗಾದರೆ ನಿಮಗೆ ಆ 'ಕೇಂದ್ರದವರ ಮಾತೇ' ಬಹಳ ಪ್ರಾಧಾನ್ಯವೋ? ಹಾಗೆ ನೀವು ಅವರದೇ ಒಂದು ಪ್ರಧಾನವಾಕ್ಯವೆಂದು ಭಾವಿಸಿದ್ದರೆ ನೀವು ಸ್ವತಂತ್ರವಾಗಿ ಕೆಲಸ ಮಾಡತಕ್ಕದ್ದು ಯಾವಾಗ? ಈ ಪಾನನಿರೋಧವನ್ನು ತಾವು ಇಷ್ಟರೊಳಗಾಗಿಯೇ ಹಾಸನ ಜಿಲ್ಲೆಯಲ್ಲಿ ಜಾರಿಗೆ ಕೊಡಬೇಕಾಗಿತ್ತು. ಹಾಗೆ ತಾವು ಕೊಡದೆ ಇರತಕ್ಕದ್ದೇ ಈಗ ಈ ಪರಾವು ಬರಲು ಕಾರಣವಾಯಿತು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆದುದರಿಂದ ಅದಕ್ಕೆ ತಾವೀಗ ಬೆಂಬಲ ನೀಡಲೇಬೇಕಾಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನನಗೆ ಹೀಗೆ ಅನಿಸುತ್ತಿದೆ—'ಅಟ್ಟಕ್ಕೇ ಹಾರದವನು, ಬೆಟ್ಟಕ್ಕೆ ಹಾರುವನೆ?' ಹಾಗೆ ನಿಮ್ಮಲ್ಲಿ ಕನಿಕರ, ನದುದ್ದೇಶಗಳಿವೆ. ಆದರೆ, ಇದನ್ನು ತೋರಿಸಲು ಇರತಕ್ಕ ಒಂದೇ ಮಾರ್ಗ, ಈ ಕೂಡಲೆ ಇದನ್ನು ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೆ ತರುವುದೇ ಏನಾ ಬೇರೆ ಏನೂ ಇಲ್ಲ. ಮೊದಲು ತಾವು ಇದನ್ನು ಮಾಡಿದ್ದೇ ಆದರೆ ಆಗ ಪ್ರತಿಯೊಬ್ಬರ ಜೀವನದ ಮಟ್ಟವು ತನ್ನಷ್ಟಕ್ಕೆ ತಾನೆ ಏರುತ್ತದೆ. ತಾವು ಇದಕ್ಕಿಂತಲೂ ಮತ್ತಾವ ಒಂದು ದೊಡ್ಡ ಉಪಕಾರ ಮಾಡಬೇಕಾಗಿಲ್ಲ. ಹೀಗೆ ತಾವು ಈ ಒಂದು ಬಾಬನ್ನು ಜಾರಿಗೆ ತರುವುದರಿಂದಲೇ ಜೀವನದ ಮಟ್ಟ, ಅದರಲ್ಲೂ ಬಡವನ ಜೀವನದ ಮಟ್ಟವನ್ನು ಉತ್ತಮ ಪಡಿಸಬೇಕಾದ್ದು ಒಂದು ಮೂಲಭೂತ ನೀತಿ. ಇದರ ಒಟ್ಟು ಸಾರಾಂಶ ಇಷ್ಟೆ—ಪಾನನಿರೋಧವನ್ನು ಜಾರಿಗೆ ತಂದರೆ ಜನರ ಜೀವನದ ಮಟ್ಟ ಉತ್ತಮಗೊಳ್ಳಲು ಸಹಾಯವಾಗುತ್ತದೆ ಎಂದು. ಆದರೆ ಈ ವಿಷಯವಾಗಿ ತಾವು ಮಾಡತಕ್ಕ ವಾದಕ್ಕೆ ನಾನು ಬೆಲೆ ಕೊಡುವುದಕ್ಕಾಗುವುದಿಲ್ಲ.

'ನಾನು ಮತ್ತೊಂದು ಅಂಶ ಕೇಳಬೇಕಾಗಿದೆ. ತಾವೇನೋ ಚಿತ್ರದುರ್ಗ ಇತ್ಯಾದಿ ಕಡೆಗಳಲ್ಲಿ ಈ ಪಾನನಿರೋಧವನ್ನು ಜಾರಿಗೆ ತಂದಿದ್ದೀರಿ. ಅವರ ಬಗ್ಗೆ ನಿಮಗೇನೋ ಈಗ ಕನಿಕರ ಉಂಟಾಗಿರಬಹುದು. ಆದರೆ ತಾವು ಅವೇ ಕನಿಕರವನ್ನು ಬೇರೆ ಜಿಲ್ಲೆಗಳವರ ಬಗ್ಗೆ ಏಕೆ ತೋರಿಸಬಾರದು? Is it due to weakness of our Government in not being able to control illicit distillation? ಅಥವಾ ಈ ಕುಡಿತ ಅನ್ನುವುದನ್ನು ತಪ್ಪಿಸುವುದಕ್ಕಾಗಿದೆಯೋ! ಪಾನನಿರೋಧ ಬರುವುದಕ್ಕೆ ಮೊದಲೇ ಜನರು ಅನೇಕ ರೀತಿಯಲ್ಲಿ ತೆರಿಗೆ ಕೊಡುತ್ತಿದ್ದರೂ, ಈಗ ಇದನ್ನು ಕೆಲವು ಕಡೆ ಜಾರಿಗೆ ತಂದು ಕೆಲವು ಕಡೆ ಜಾರಿಗೆ ತಾರದಿದ್ದರೂ, ಎಲ್ಲರೂ, ತಾವು ಹಾಕಿರುವ ಹೊಸ ಹೊಸ ತೆರಿಗೆಗಳನ್ನು ತರಲೇಬೇಕಾಗಿದೆ. ಆದರೆ ಈ ವಿಚಾರಗಳನ್ನೆಲ್ಲಾ ಯಾರೂ ಎತ್ತಿ ಹಿಡಿದು ತಕರಾರು ಮಾಡುತ್ತಿಲ್ಲ. What justification have you to concentrate only on five districts? ಏತಕ್ಕಾಗಿ ತಾವು ಇಂಥಾ invidious distinction ತೋರಿಸುತ್ತಿದ್ದೀರಿ? ಆದರೆ ಇದು ಖಂಡಿತವಾಗಿ ಸರಿಯಾದ ನೀತಿಯೂ ಅಲ್ಲ ಮತ್ತು ರೀತಿಯೂ ಅಲ್ಲ. ತಮ್ಮ ನೀತಿ ಒಂದೇ ಆಗಿದ್ದ ಪಕ್ಷದಲ್ಲಿ ತಾವು ಧೈರ್ಯವಾಗಿ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಕೂಡಲೇ ಜಾರಿಗೆ ತಂದು ಬಿಡಿ. ತಾವು ಈ ಬಗ್ಗೆ ಎಷ್ಟು ಸಾವಕಾಶ ಮಾಡಿದರೆ ಜನರು ಅಷ್ಟೂ ಅಧೋಗತಿಗೆ ಇಳಿದುಬಿಡುತ್ತಾರೆ. ಅದರಲ್ಲೂ ಈ ಯುದ್ಧದಿಂದಾದ ಪರಿಣಾಮವಾಗಿ ಜನರ ಕೈಲಿ ದುಡ್ಡು ವಿಶೇಷವಾಗಿ ಸೇರಿ ಹೋಗಿ ಜನರಂತೂ ಪೂರಾ ದುರಭ್ಯಾಸಗಳಿಗೆ ಈಡಾಗಿ ಹೋಗಿದ್ದಾರೆ. ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನಮ್ಮ ಹಾಸನ ಜಿಲ್ಲೆಯಲ್ಲಿ ಈ ಕುಡಿತವಾಡತಕ್ಕವರು ಪಾಪಿಗಳೆಂದೂ, ಅಂಥವರ ಮನೆಯಲ್ಲಿ ಬಾಂಧವ್ಯ ಬೆಳಸತತ್ಕಾದ್ದು ಒಂದು ನಾಚಿಗೇಡೆಂಬುದಾಗಿ ನಾವೆಲ್ಲರೂ ಭಾವಿಸಿದ್ದೆವು. ಅದರಂತೆ ಅನೇಕರು ನಡೆದುಕೊಳ್ಳುತ್ತಲೂ ಇದ್ದರು. ಆದರೆ ಈಗ ಅವರೆಲ್ಲರ ಕೈಲೂ ಹಣ ಪಾಸ್ತಿಯಾಗಿ ಹೋಗಿ, ಅವರಲ್ಲಿದ್ದ ನಾಚಿಕೆ, ಮರ್ಯಾದೆ ಇತ್ಯಾದಿಗಳನ್ನೆಲ್ಲಾ ತ್ಯಾಜ್ಯ ಮಾಡಿ ಹಗಲೇ ರಸ್ತೆಯಲ್ಲಿ ಅಲ್ಲಲ್ಲೇ ಬಿದ್ದಿರುವುದು ನನ್ನ ಗೋಚರಕ್ಕೆ ಬಂದಿದೆ. ಹೀಗೆಲ್ಲ ನೋಡುವುದರಲ್ಲಿ ಇತ್ತೀಚೆಗೆ ಶೇಕಡ 25ರಷ್ಟು ಮೊದಲಿಗಿಂತಲೂ ಕುಡಿತ ಹೆಚ್ಚಾಗಿದೆಯೆಂಬುದು ಚೆನ್ನಾಗಿ ಎಲ್ಲರಿಗೂ ವೇದ್ಯವಾಗುತ್ತಿದೆ. ಇದಕ್ಕೆ ನಾನು ತಮಗೊಂದು ಪ್ರತ್ಯಕ್ಷ ನಿದರ್ಶನಕ್ಕಾಗಿ ಒಂದು ವಿಚಾರ ಹೇಳಬೇಕಾಗಿದೆ. ಒಂದು ಮತದಿಂದ ಜನರನ್ನು ಇನ್ನೊಂದು ಮತಕ್ಕೆ ಮತಾಂತರ ಗೊಳಿಸುವಾಗ ಅವರೂ ಕೂಡ ಈ ತಕ್ಷಣವೇ ಹಾಗೆ ಮತಾಂತರ ಹೊಂದಿದ ಮನುಷ್ಯನು ಆ ಮತಾಭಿಮಾನ ಪಡೆಯಲು ಸಾಧ್ಯವಿಲ್ಲ. ಅದೇನಿದ್ದರೂ ಆತನ ಮುಂದಿನ ತಲೆಗೆ ಬರತಕ್ಕ ವಿಚಾರವೆಂಬುದಾಗಿ ನಿರ್ಧರಿಸಿದ್ದಾರೆ. They are more practical than our Government. ಈ ಕುಡಿತ ಅನ್ನುವುದು

(ಶ್ರೀ ಎಚ್. ಬಿ. ಗುಂಡಪ್ಪಗೌಡರು.)

ಮೊದಲನಿಂದಲೂ ಅಭ್ಯಾಸಕ್ಕೆ ಬಂದು ಹೋಗಿರುತ್ತೆ. They are confirmed drunkards. Somehow they will drink. That is after all a small percentage. ಇದಕ್ಕಿಂತಲೂ ಅತಿಶಯವಾಗಿ ಹೆಂಗಸರು ಮಕ್ಕಳಿಗೆಲ್ಲ ಕುಡಿಯುವುದನ್ನು ಅಭ್ಯಾಸ ಮಾಡಿಸುತ್ತಿದ್ದಾರೆ. ಈ ಹೆಂಡದ ಅಂಗಡಿ ಬಳಿ ಹೋಗಿ ನೋಡಿದರೆ ಇದೆಲ್ಲಾ ಗೊತ್ತಾಗುತ್ತೆ. ಕೆಡ್ಡಾ ಕಾರ್ಯಾಚರಣೆಯಲ್ಲಿ ಹೇಗೆ ಪಳಗಿದ ಅನೆಗಳನ್ನಿಟ್ಟುಕೊಂಡು ಹೊಸ ಹೊಸ ಅನೆಗಳನ್ನು ಹಿಡಿಯುತ್ತಾರೋ ಹಾಗೆ ಈ ಕುಡಿತದ ಅಭ್ಯಾಸವೇ ಇಲ್ಲದಿದ್ದವರಿಗೂ ಸಹ ಈ ಕುಡಿತದ /ಚಟಕ್ಕೆ ಬಿದ್ದಿರತಕ್ಕವರು, ಅಲ್ಲದ ನಲ್ಲದ ಕಾರಣಗಳನ್ನು ಹೇಳಿ ಅವರಿಗೆ ಈ ಕುಡಿತದ ಅಭ್ಯಾಸ ಮಾಡಿಸುತ್ತಿದ್ದಾರೆ. ಥಳಿ ಜ್ವರ ಬಂದಿದ್ದಾಗ, ಈ ಹೆಂಡ ಅಥವಾ ಸಾರಾಯಿ ಕುಡಿದರೆ, ಆ ಥಳಿ ಜ್ವರ ವಾಸಿಯಾಗುತ್ತೆಂದು ಹೇಳಿ 4–5 ಸಾರಿ ಇದನ್ನು ಅವರಿಗೆ ಕುಡಿಯುವಂತೆ ಪ್ರೇರೇಪಿಸಿದ್ದೇ ಒಂದು ಕಾರಣವಾಗಿ ಈಗ ಅವರು ಖಾಯಂ ಆಗಿ ಕುಡಿಯಲಿಕ್ಕೆ ಪ್ರಾರಂಭಿಸಿರುತ್ತಾರೆ ಹೀಗೆ ಒಂದೆರಡು ದಿನಗಳ ಹಂಗಾಮಿ ಅಭ್ಯಾಸ ಸಹ ಕ್ರಮೇಣ ಖಾಯಂ ಅಭ್ಯಾಸಕ್ಕೆ ತಿರುಗಿಕೊಳ್ಳಲು ಇದರಿಂದ ದಾರಿಯಾಗುತ್ತದೆ. ಈ ಅಂಶಗಳನ್ನೆಲ್ಲಾ ಸರ್ಕಾರದವರು ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ಹೀಗೆ ಇಂದು ಜನರ ಕೈಲಿ ದುಡ್ಡು ಹೆಚ್ಚಾಗಿ ಹೋಗಿ ಅವರು ಸರ್ಕಾರವನ್ನೇ ಈಗ ಹೆದರಿಸಲಿಕ್ಕೂ ಪ್ರಾರಂಭ ಮಾಡಿದ್ದಾರೆ. ಆದರೆ ಈ ವಿಚಾರಗಳನ್ನೆಲ್ಲಾ ಈಗ ಸಭೆಯಲ್ಲಿರುವ ಮಾನ್ಯ ಮಂತ್ರಿಗಳಾದ ಶ್ರೀ ಸಿದ್ದಯ್ಯನವರೂ, ನಾವೂ ಬಹಳ ಹಿಂದೆಯೇ ಎಷ್ಟೋ ಚರ್ಚೆ ಮಾಡಿ, ಇದನ್ನು ಹೀಗೆ ಮಾಡಬೇಕೆಂದು ಇದನ್ನೆಲ್ಲಾ ಬಹಳ ಹಿಂದಿನ ದಿನಗಳಲ್ಲೇ ತೀರ್ಮಾನ ಮಾಡಿದ್ದೆವು. ಆದರೆ ತಾವು ಕೇಳಬಹುದು, "ನೀವೂ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಿರಲ್ಲ, ಆಗ ತಾವೇಕೆ, ಇದನ್ನು ಮಾಡಲಿಲ್ಲ" ಎಂದು. ಆದರೆ ಆಗ ನಮ್ಮ ಕೈಲಿ ಸರ್ಕಾರ ಇರಲಿಲ್ಲ. ಈ ದಿವಸ ಆ ಸರ್ಕಾರವೇ ನಿಮ್ಮ ಕೈಲಿದೆ. ತಾವು ಯಾವ ರೀತಿ ಬೇಕಾದರೂ ಅಧಿಕಾರವನ್ನು ಚಲಾಯಿಸಬಹುದು. ನಿಮ್ಮನ್ನು ಈಗ ಕೇಳತಕ್ಕವರೇ ಇಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಇವರು 'ಆಡಿದ್ದೇ ಆಟ—ಹೂಡಿದ್ದೇ ಲಗ್ಗೆ'.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಏನು ಜಗಳೂರಿನಲ್ಲೋ?

Sri H. B. GUNDAPPA GOWDA.—Every day the Government would be committing a sin in not having introduced prohibition, while they honestly accept the policy of implementing it. Four districts still remain.

The Hon'ble Sri K. T. BHASHYAM.—It is not a question of honesty.

Sri H. B. GUNDAPPA GOWDA.—It may be a question of honesty or practicability. But I am going to question it, till it is brought home to you.

Janab SYED ABDUR RAHMAN (Chikmagalur *cum* Shimoga Muslim).—It is only a matter of expediency.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—This is a thing touching more or less the question of raising the standard of living of the ordinary man. There I cannot enter into any compromise. ಆದ್ದರಿಂದ ಸಂಸ್ಥಾನದಲ್ಲೆಲ್ಲಾ ಪೂರ್ತಿಯಾಗಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಒತ್ತಾಯಮಾಡುತ್ತೇನೆ. ಒಂದು ವೇಳೆ ಅದು ಸಾಧ್ಯವಿಲ್ಲದಿದ್ದರೆ ಕೊನೆಯಪಕ್ಷ ಹಾಸನ ಜಿಲ್ಲೆಯಲ್ಲಾದರೂ ಜಾರಿಗೆ ತಂದೇ ತೀರಬೇಕು. ಹಾಸನ ಜಿಲ್ಲೆಗೆ ಸುತ್ತಲೂ ಇರುವ ಪ್ರದೇಶಗಳಲ್ಲಿ ಅಂದರೆ ದಕ್ಷಿಣ ಕೆನರ ಮತ್ತು ತುಮಕೂರು ಈ ಪ್ರಾಂತಗಳಲ್ಲಿ ಆಗಲೇ ಪಾನನಿರೋಧವು ಜಾರಿಯಲ್ಲಿದೆ. ಆದ್ದರಿಂದ ಅಲ್ಲಿಂದ ಹೆಚ್ಚು ಮಂದಿ ಆ ಕಡೆ ಬರುವುದರಿಂದ ಜನರಿಗೆ ಎಷ್ಟೋ ಕಷ್ಟವಿದೆ. ಮಲೆನಾಡಿನಲ್ಲಿ ಹೆಚ್ಚಾಗಿ ಕುಡಿಯುತ್ತಿದ್ದರು. ಈಗ ಅದು ಮೈದಾನದಲ್ಲೂ ಹರಡುತ್ತಿದೆ. ಆದ್ದರಿಂದ ಕೊನೆಯಪಕ್ಷ ಈ ನಿರ್ಣಯದಲ್ಲಿ ಕೇಳಿರುವಷ್ಟನ್ನಾದರೂ ಒಪ್ಪಿಕೊಳ್ಳುತ್ತಾರೆಂದು ನಂಬುತ್ತೇನೆ.

Sri H. C. LINGA REDDY (Kolar District—General).—Sir, I move for closure. All these aspects have been covered by the cut motion.

Janab MAHMOOD SHERIFF (Mysore *cum* Mandya *cum* Hassan—Muslim).—Mr. Speaker, Sir, the position before the House is that prohibition should be introduced in Hassan, and as the amendment would have it, in all the four remaining districts of the Mysore State in the next official year. Although the proposition seems to be very simple, yet it appears to me that it is not free from many complications. Although prohibition was introduced only about three years ago, still it has given rise to a controversy as to the advisability to continue it and also about the pace with which this is to be continued. There is a section of the people who are as enthusiastic and as keen as ever to see that prohibition is effected immediately and in all its entirety. There is yet another body of public opinion which holds that since the experiment has not worked satisfactorily, it is no use wasting any further money and to put additional strain on the public exchequer. There is yet another body of public opinion which although convinced of the many advantages and benefits flowing from this policy, yet, since they do not find the results satisfactory, would adopt a middling position and would like to wait and watch. To this third group belong some of the members of the

Central Cabinet. You may remember that in 1949 somewhere in October or September, an Excise Ministers' Conference was held in Delhi, presided over by Sri John Matthai. Mysore also was represented by its Excise Minister. There this question was mooted and I tried to seek a clarification from the Chairman about their attitude in the matter. I wanted to see how they thought of it, whether they were for prohibition in its totality or whether they liked to have it piecemeal, or as Pandit Jawaharlal Nehru had said again and again that it was best to hasten slowly. But then at that time since the Madras Government was determined, although at the sacrifice of 18 crores, to see that prohibition was introduced and carried through to its logical conclusion and since the Bombay Government also with a like determination wanted to put it through, the Chairman said that the Provinces would have to adopt whatever policy they would consider best in the circumstances. Therefore, Sir, we did not have any definite inkling from them though subsequently the forming observation was made by them in the Memorandum on Federal Financial Integration. It is stated there :

"The committee also sounds a note of warning that the Governments concerned should proceed with matters like prohibition policy and abolition of Jagirs, etc., with caution and the committee is convinced that after a number of years the finances cannot bear the loss of revenue involved and as has been pointed out by the Government of India to Provinces, execution of such policies will deplete the efforts now being made to check inflation.

Sri H. B. GUNDAPPA GOWDA.—May I interrupt for a moment? To proceed with caution means that at a particular stage, before introducing prohibition or before taking any decision regarding the prohibition policy, you, must necessarily proceed with caution. But once you have taken a decision in the matter of introducing the prohibition the question of caution does not arise at all.

Sri G. A. ACHARYA (Bangalore District—General).—That statement is made after the integration is accepted. That is a note of warning taking into consideration the existing resources of the State of Mysore.

Janab MAHMOOD SHERIFF.—I am coming to that Sir. So now, coming nearer home let us examine and analyse the policy which we have adopted regarding the introduction of prohibition. When Responsible Government was achieved and the first popular ministry was installed in office, one of the measures which received the greatest amount of enthusiasm was this policy of introduction of prohibition. I think the Government was right in their enthusiasm because I knew the wreck and ruin which the drink evil was causing and about which I do not want to dilate at present. In response to the oft-repeated demands on the floors of the Representative Assembly as well as the Legislative Council, the first popular Ministry wanted that prohibition should be effected as early as possible. Therefore in the first year, they made three districts dry in the subsequent year two districts dry and now the question is, whether the remaining four districts also go dry? Many arguments have been advanced for and against this. My Hon'ble friend Sri Gundappa Gowda just now said that, irrespective of the fact as to whether the public exchequer has been affected or not the Government is in honour bound to see that this policy should be introduced in all parts of Mysore State. With due deference to his opinion let us examine the question as practical men. I do not mean that the Government should think of going back on their policy, I would say no Government worth the name should do it (hear, hear from Sri H. B. Gundappa Gowda). I have always held that the revenue yielded by the liquor transaction is a thing which should not be touched even with a pair of tongs. That opinion I still hold. The Mysore Government stands committed to prohibition and they will have to pursue it to its logical conclusion. But let not enthusiasm run riot. Let us go slow as practical men and as men of wisdom to whom the destiny of 80 lakhs of people has been entrusted. Let us be circumspect about the whole thing. It was introduced only three

(JANAB MAHMOOD SHERIFF.)

years ago and people who have hugged this habit for ages cannot be expected to give it up suddenly. It is impossible. Even public co-operation is not forthcoming in adequate measure. Several measures have been introduced and appeals have been made to them, but still people have been very lukewarm and showing stepmotherly treatment towards it. Very lately, the Police Department has also been asked to take up the affair. The question is full of difficulties. It is easy to say that immediately and even in the course of about two or three months, the whole State should go dry. I would therefore say with due deference to the Hon'ble Member Sri Hutche Gowda and some others who are of the same view, let us examine the whole question with circumspection and take a practical view of the whole subject and come to a decision. It is no use to hasten the matter because I feel that at this stage, when the public exchequer is not sufficiently large to meet other demands, when so many schemes have to be given effect to, when more food has to be grown in order to feed the teeming millions, I would only counsel caution and say that it is not a matter in which merely enthusiasm will help. So far as Government are concerned, I can say they will pursue this policy to its logical conclusion and there should be no idea to escape from that position. There is no escapism so far as Government is concerned.

Sri H. B. GUNDAPPA GOWDA.— What is the income derived from Hassan District for this year under excise?

The Hon'ble Sri H. SIDDAIYA.— Thirty-six lakhs.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ-ನಿಮ್ಜ ಪಂಗಡ).—ಅಧ್ಯಕ್ಷರೇ, ಶ್ರೀ ಬೋರಣ್ಣಗೌಡರು ತಂದಿರತಕ್ಕ ಈ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ ಮತ್ತು ಶ್ರೀ ಹುಚ್ಚೇಗೌಡರು ತಂದಿರತಕ್ಕ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ನಿರ್ಣಯದಲ್ಲಿ 1951-52ನೆಯ ಸಾಲಿನಲ್ಲಿ ಎಂಬುದು ಇಲ್ಲದಿದ್ದ ಪಕ್ಷದಲ್ಲಿ ತಿದ್ದುಪಡಿಯನ್ನೂ ಒಪ್ಪಿಕೊಳ್ಳಬಹುದಾಗಿತ್ತು. ಆದರೆ 1951-52ನೆಯ ಇಸವಿಯಲ್ಲಿ ಎಂದು ತಿದ್ದುಪಡಿಯಲ್ಲಿರುವುದರಿಂದ ಈ ತಿದ್ದುಪಡಿ ಸೂಕ್ತವಲ್ಲವೆಂದು ಇದನ್ನು ವಿರೋಧಿಸುತ್ತೇನೆ ಮತ್ತು ನಿರ್ಣಯವನ್ನು ಸಮರ್ಥಿಸುತ್ತೇನೆ. ಕಳೆದ ಅಧಿವೇಶನದಲ್ಲಿ ನಾನು ಪಾನನಿರೋಧದ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ ಅದಕ್ಕೆ ಉತ್ತರ ಈ ರೀತಿ ಬಂದಿದೆ:

Q.—May I know the reasons as to why total prohibition was not extended to other districts in the State;

Answer.—The accepted policy for extension of prohibition in the entire State gradually.

Q.—Whether they have decided or whether it is under their consideration to extend total prohibition to the other three districts in the State?

Answer.—The matter is under consideration of Government.

ಇನ್ನೊಂದು ಸರ್ಕಾರಿ ಆಜ್ಞೆ ಏಪ್ರಿಲ್ 1949ರಲ್ಲಿ ಆಗಿರುವುದರಲ್ಲಿ ಸರ್ಕಾರದ ನಿರ್ದಿಷ್ಟವಾದ ನೀತಿ ಏನೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅದು ಈರೀತಿ ಇದೆ:

G. O. dated 4th April 1949.

"In pursuance of the accepted policy of introducing total prohibition within a period of five years the Government have decided after careful examination of the several aspects of the case that total prohibition should be extended to the districts of Shimoga, Chitaldrug and Chickmagalur with effect from 1st July 1949."

At this stage (10-45 a.m.) Sri S. Rangaramiah took the Chair.

ಇದಕ್ಕೆ ಕಾರಣ ಎಲ್ಲರಿಗೂ ಗೊತ್ತಿದೆ. 1947-48ರಲ್ಲಿ ಪ್ರಾರಂಭ ಮಾಡಿ ಐದು ವರ್ಷ ಕಾಲದಲ್ಲಿ ಸಂಸ್ಥಾನದಲ್ಲೆಲ್ಲಾ ಪೂರ್ಣ ಪಾನನಿರೋಧ ಜಾರಿಗೆ ಬರಬೇಕೆಂದು ಉದ್ದೇಶವಿತ್ತು. ಕೊನೆಯಪಕ್ಷ ಇದರ ಪ್ರಕಾರ 1952ನೆಯ ಸಾಲಿಗೆ ಪೂರ್ತಿ ಜಾರಿಗೆ ಬರಬೇಕಾಗಿದೆ. ಪ್ರತಿವರ್ಷವೂ ಕಾರ್ಯಕ್ರಮದ ಪ್ರಕಾರ ಮಾಡಿಕೊಂಡರೆ 1952ರಲ್ಲಿ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರುತ್ತದೆ. 1948ರಲ್ಲಿ ಮೂರು ಜಿಲ್ಲೆಗಳಲ್ಲಿ ಜಾರಿಗೆ ತಂದು, 1949ರಲ್ಲಿ ಎರಡು ಜಿಲ್ಲೆಗಳಲ್ಲಿ ತಂದು, 1950ರ ಜುಲೈನಲ್ಲಿ ಇನ್ನೊಂದು ಜಿಲ್ಲೆಯಲ್ಲಿ ಮಾಡಿದ್ದರೆ, 1951ರಲ್ಲಿ ಮೈಸೂರು, ಮಂಡ್ಯ, 1952ರಲ್ಲಿ ಬೆಂಗಳೂರು ಹೀಗೆ ಎಲ್ಲದರಲ್ಲೂ ಜಾರಿ ಆಗಬೇಕಾಗಿತ್ತು. ಹೀಗೆ ಮಾಡದೇ ಇರುವುದರಿಂದ ಈ ಪಾನನಿರೋಧದ ನೀತಿಯನ್ನು ಮುಂದುವರಿಸುವುದರಲ್ಲಿ ತಪ್ಪು ಮಾಡಿದಂತಾಗುತ್ತದೆ. ಇದೇ ವಿಚಾರವಾಗಿ ನಾನು ಹಿಂದೇ ಕೇಳಿದ ಉಪಪ್ರಶ್ನೆಗಳಿಗೆ ಸರ್ಕಾರದವರು ಕೊಟ್ಟರುವ ಉತ್ತರದ ವಿಚಾರವನ್ನು ನಾವು ಈಗ ಪ್ರಸ್ತಾಪಿಸುವುದಿಲ್ಲ. ಪ್ರಾಯಶಃ ಕುಡಿತವನ್ನು ನಿಲ್ಲಿಸಬೇಕೆಂಬ ವಿಚಾರವಲ್ಲಿ ಸರ್ಕಾರದವರಿಗೂ ಸಾರ್ವಜನಿಕರಿಗೂ ಯಾವ ಭಿನ್ನಾಭಿಪ್ರಾಯವಿಲ್ಲ. ಇದರಲ್ಲಿರುವ ಕೆಲವು ತೊಂದರೆಗಳಿಂದ ಪ್ರಾಯಶಃ ಸರ್ಕಾರದವರು ಪಾನನಿರೋಧ ನೀತಿಯನ್ನು ಸ್ವಲ್ಪ ನಿಧಾನವಾಗಿ ಯೋಚನೆ ಮಾಡುತ್ತಿರಬಹುದು. ಹಣ ಕಾಸಿನ ದೃಷ್ಟಿಯಿಂದ ಯೋಚನೆ ಮಾಡುತ್ತಿರಬಹುದೆಂಬ ಊಹೆ ಜನರಲ್ಲಿ ಬಂದಿದೆ. ಜನಾಬ್ ಮಹಮೂದ್ ಷೆರೀಫ್‌ರವರು ಹೇಳಿದ ಹಾಗೆ ಕುಡಿತದಿಂದ ಬರುವ ಹಣ tainted money. ಆದುದರಿಂದ ಇದನ್ನೇ ಮುಖ್ಯವಾಗಿ ಇಟ್ಟುಕೊಳ್ಳಬಾರದು.

ಕುಡಿತದಿಂದ ದೇಶದ ಬಡ ಜನರ ಮೇಲೆ ಆಗುವ ಪರಿಣಾಮದ ವಿಚಾರ ಒಂದೆರಡು ಮಾತು ಹೇಳುತ್ತೇನೆ. ಪ್ರಕೃತ ಆಹಾರ ಪರಿಸ್ಥಿತಿಯಿಂದ ಅನ್ನಾಹಾರವಿಲ್ಲದೇ ಇರುವವರಿಗೆ ಪಾನ ಮಾಡುವ ಅವಕಾಶ

ವಿದ್ದರೆ ಅದರಲ್ಲಿ ವಿಚಿತ್ರ ಇದೆ ಎಂಬ ಭಾವನೆ ಅನೇಕ ರಲ್ಲಿರುವ ಹಾಗಿದೆ. ಅದರೆ ಇದರಿಂದುಂಟಾಗತಕ್ಕ ಕೆಟ್ಟ ಪರಿಣಾಮವನ್ನು ಯೋಚಿಸಿದರೆ ಎಂದಿಗೂ ಇದನ್ನು ಸೇವಿಸಬಾರದು. ಇದರ ಪಾನವನ್ನು ತಪ್ಪಿಸಿದರೆ ದೇಶದಲ್ಲ ಅನೇಕ ಜನರಿಗೆ ಸಹಾಯವಾಗುತ್ತದೆ. ಕರ್ನಾರದವರ ಮೂಲ ನೀತಿ ಪಾನನಿರೋಧವೇ ಂಬುದು ಮಾನ್ಯ ಸದಸ್ಯರಿಗೆ ಗೊತ್ತೇ ಇದೆ.

ತಮಗೆ ಗೊತ್ತಿರುವ ಹಾಗೆ ಭಾರತ ರಾಜ್ಯಾಂಗ ಲ್ಲಿ ಈ ರೀತಿ ಹೇಳಿದೆ.

"The State shall promote with special care he economic interests of the weaker sections of he people, and in particular of the Scheduled lastes and the Scheduled Tribes and shall rotect them from social injustice, etc.

The State shall regard the raising of the level f nutrition and the standard of living of its eople and the improvement of the public health s among its primary duties in particular, he State shall endeavour to bring about prohibiion and of the consumption except for medicinal urpose of intoxicating drinks and drugs which re injurious to health."

ರಾಜ್ಯಾಂಗದಲ್ಲೇ ಪಾನನಿರೋಧದ ವಿಷಯವನ್ನು ಕೇರಿಸಿದ್ದಾರೆ. ಇದು ಆರೋಗ್ಯಕ್ಕೆ ಹಾನಿ ತರುವು ದೆಂದು ಮನಗೊಂಡು ಹೀಗೆ ಮಾಡಿದ್ದಾರೆ.

ಇದನ್ನು directive principles ನಲ್ಲಿ ಹೇಳಿ ವಾರೆ. ಇದನ್ನು ಈಗಾಗಲೇ ಪ್ರಾರಂಭವಾಗಿದ್ದರೆ ಮುಂದುವರಿಸಿಕೊಂಡು ಹೋಗಬೇಕು. ಇನ್ನೂ ಪ್ರಾರಂಭವಾಗದಿದ್ದರೆ ಪ್ರಾರಂಭಿಸಬೇಕು. ಇದು ಹೊರತು ಭಾರತ ರಾಜ್ಯಾಂಗವನ್ನು ಒಪ್ಪಿಕೊಂಡಿರುವುದರಿಂದ ಪ್ರಾರಂಭಮಾಡಿರುವುದನ್ನು ನಿಲ್ಲಿಸುವುದು ಅಥವಾ ತಾತ್ಸಾರಮಾಡುವುದು ಸಾಧ್ಯವಲ್ಲ. ಶ್ರೀ ವೀರಪ್ಪ ನವರು ಹೇಳಿದ್ದನ್ನು ನೋಡಿದರೆ, ಈ ಪಾನನಿರೋಧ ಯಶಸ್ವಿಯಾಗಿಲ್ಲವಾಗಿರುವುದರಿಂದ ಇದನ್ನು ಮುಂದು ವರಿಸದೇ ಯಿದ್ದರೇ ಒಳ್ಳೆಯದೆಂದು ಅಭಿಪ್ರಾಯಬಂತು. ನಾನು ಹೇಳುತ್ತೇನೆ. ಪ್ರಾಯಶಃ ಈಗ ಜಾರಿಗೆ ತಂದಿರ ತಕ್ಕ ಜಿಲ್ಲೆಗಳಲ್ಲಿ ಸರಿಯಾಗಿ ನಡೆಯದೆ ಕಷ್ಟವಾಗಿರುವು ದಕ್ಕೆ ಕಾರಣ ಪಾನ ನಿರೋಧ ನೀತಿಯನ್ನು ಮುಂದು ವರಿಸದೆ ಬಾಕಿ ಜಿಲ್ಲೆಗಳಲ್ಲಿ ಕುಡಿತವನ್ನು ಇನ್ನು ಇಟ್ಟಿ ರುವುದೇ ಆಗಿದೆ. ಈಗ ಆ ಜಿಲ್ಲೆಗಳಲ್ಲಿಯೂ ಪಾನ ನಿರೋಧ ಜಾರಿಗೆ ತಂದರೆ ಈ ಕಷ್ಟ ನಿವಾರಣೆಯಾಗು ತ್ತದೆ. ಆದಕಾರಣ ಅಲ್ಲಿಯೂ ಸರ್ಕಾರದವರು ಜಾರಿಗೆ ತರಬೇಕು. ಈಗಲಾದರೂ ದೊಡ್ಡ ಮನಸ್ಸು ಮಾಡಿ 1951ನೆಯ ಸಾಲನಲ್ಲಿ ಇನ್ನೂ ಒಂದು ಜಿಲ್ಲೆಗಾದರೂ ಜಾರಿಗೆ ತಂದು, ಉಳಿದ ಜಿಲ್ಲೆಗಳಲ್ಲಿ 1952, 1953 ರಲ್ಲಿ ತಂದರೆ ಅಲ್ಲಿಗೆ ಸರ್ಕಾರದವರು ಹಿಂದೆ ಐದು ವರ್ಷಗಳಲ್ಲಿ ಪೂರ್ತಿ ಸಂಸ್ಥಾನದಲ್ಲೆಲ್ಲಾ ಜಾರಿಗೆ ತರ ಬೇಕೆಂದು ಮಾಡಿರುವ ಯೋಜನೆಗೂ ಸರಿಹೋಗು ತ್ತದೆ. ಹಣದ ನಷ್ಟವಾಗುತ್ತದೆಂಬ ಒಂದು ದೃಷ್ಟಿ ಯನ್ನೇ ಇಟ್ಟುಕೊಳ್ಳದೆ ದೇಶದ ನೈತಿಕ ಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಏನೇ ತೊಂದರೆಯಾದರೂ ಅದ್ದಿ ಅತಂಕಬಡದೆ ಮುಂದುವರಿಸಬೇಕೆಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ. ಕೊನೆಯದಾಗಿ, ಈ ನಿರ್ಣಯ ಈಗಾಗಲೇ ಸಾಕಷ್ಟು ಚರ್ಚೆಯಾಗಿರುವು ದರಿಂದ ಮುಕ್ತಾಯದ ಸೂಚನೆಯನ್ನು ಮಾಡುತ್ತೇನೆ.

Mr. CHAIRMAN.—The question is :

"That the question be now put"

(The motion was adopted)

Mr. CHAIRMAN.—Sri Boranna Gowda will reply.

Sri B. HUTCHE GOWDA—I want to say a few words as I have moved an amendment.

Mr. CHAIRMAN.—The Hon'ble Member has no right of reply.

ಶ್ರೀ ಬಿ ಎಚ್. ಬೋರಣ್ಣಗೌಡರು—ಸ್ವಾಮಿ, ನನ್ನ ನಿರ್ಣಯದ ಪರವಾಗಿ ಮಾತನಾಡಿರತಕ್ಕವರೆಲ್ಲರೂ ಇದನ್ನು ಒಪ್ಪಿಕೊಂಡು ಇದೇ ರೀತಿ ಮುಂದುವರಿಸಬೇ ಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪಾನ ನಿರೋಧವನ್ನು ಜಾರಿಗೆ ತರುವ ವಿಚಾರದಲ್ಲಿ ಆಗಲೇ ಸೂಕ್ತ ಸಲಹೆಗಳನ್ನು ಕೊಟ್ಟಿದ್ದೇನೆ. ಆದ್ದರಿಂದ ಹೆಚ್ಚಾಗಿ ಹೇಳಬೇಕಾದುದು ಏನೂ ಇಲ್ಲ. ಕೆಲವರು ಕೆಲವು ಆಕ್ಷೇಪಣೆಗಳನ್ನು ಮಾಡಿದರು. ಶ್ರೀ ಗಾಂಜಿ ವೀರಪ್ಪನವರು ಈ ನೀತಿಯನ್ನು ಪುನಃ ಪುನಃ ಹೇಳಬೇ ಕಾದ ಅವಶ್ಯಕತೆ ಉಂಟಾಗುತ್ತಿದೆ ಎಂದು ಹೇಳಿದರು. ಕಾಂಗ್ರೆಸ್‌ನವರು ಒಂದು ನೀತಿಯನ್ನು ಒಪ್ಪಿದ ಮೇಲೆ ಅದನ್ನು ಮುಂದುವರಿಸಿಕೊಂಡು ಹೋಗುವುದು ಅವರ ಕರ್ತವ್ಯವೇ ಹೊರತು, ಹಿಂದಕ್ಕೆ ಹೋಗುವುದು ಸಂಪ್ರ ದಾಯಕವಾಗಿ ಇಲ್ಲ ಎಂದು ಈ ವೇದಿಕೆಯಿಂದ ತಿಳಿಸು ತ್ತೇನೆ. 1950-51ನೇ ಸಾಲನಲ್ಲಿ ಒಂದೇ ಒಂದು ಡಿಸ್ಪ್ರಿಕ್ಟ್‌ನಲ್ಲಿ ಆದರೂ ಕೂಡ ಆಚರಣೆಗೆ ತರದೇ ತಪ್ಪಿಸಿದ್ದು ತಪ್ಪಾಯಿತು. ಆದ್ದರಿಂದ 1951-52ಕ್ಕೆ ಆದರೂ ಈ ಡಿಸ್ಪ್ರಿಕ್ಟ್‌ನಲ್ಲಿ ಆಚರಣೆಗೆ ತರಬೇಕೆಂದು ಇಷ್ಟಪಡುತ್ತೇನೆ. ಇದರಲ್ಲಿ ಯಾವ ಭಿನ್ನಾಭಿಪ್ರಾ ಯವೂ ಇಲ್ಲ. ಆದ್ದರಿಂದ ಸರ್ಕಾರದವರ ಅಭಿಪ್ರಾಯ ವೇನೆಂಬುದನ್ನು ನಿರೀಕ್ಷಿಸುತ್ತೇನೆ.

***The Hon'ble Sri H. SIDDAIYA** (Minister for Revenue and Excise).—Sir, it is really needless for me to describe the evil effects of drinking and to narrate also the benefits and advantages of prohibition. It is admitted by all sections of the people that prohibition is a very desirable thing. As a matter of fact that is the declared policy of the Government as has already been said on previous occasions. But the question now is whether the State can afford to lose this big source of income in the present financial position of the State. That is also a matter for serious consideration.

Sri B. HUTCHE GOWDA.—May I draw the attention of the Hon'ble Minister to what the Hon'ble Chief Minister stated in the last Budget Session ?

"I wanted to make another point clear. It is not on the ground of finance—It is not the main reason that we have held up this further introduction. You take it from me....."

The Hon'ble Sri H. SIDDAIYA.—I did not say that the question of finance

(THE HON'BLE SRI H. SIDDAIYA.)

is the only consideration for the slow-down policy in this behalf. As a matter of fact, during 1950-51, *i.e.*, current year, it has not been found possible to introduce or extend this policy to Hassan or any other district and that is entirely due to financial and other considerations. The demand has been made not merely on this occasion but on previous occasions also, in March and August 1950, by the very mover of this resolution and also by Sri Sooryanarayana Chetty and other representatives on the floor of this House—not merely on the floor of this House but also elsewhere—by means of resolutions and representations, for the extension of this policy. This has been advocated and pressed, particularly, and naturally, by the representatives of Hassan District.

The Hon'ble Member Sri B. Hutche Gowda was stressing on the sources of income. He said that the Government were realising a large income from the levy of Sales Tax and he was speaking as though levy of Sales Tax was a substitute for making good the loss due to prohibition and he was quoting the case of some other States like Madras in this behalf. Hon'ble Member must remember that by the levy of Sales Tax Madras is in a position to realise the entire amount they expend so far as the excise policy is concerned. It is about Rs. 16 crores to Rs. 17 crores and it is almost equal to the amount that they were realising in the Excise Department. That is not the case, fortunately or unfortunately, in Mysore.

Sri B. HUTCHE GOWDA.—Are the Government satisfied?

The Hon'ble Sri H. SIDDAIYA.—If the Hon'ble Member is not satisfied with my reply he can put me questions.

By the levy of Sales Tax in Mysore, we are able to realise only about Rs. 80 lakhs. This amount, I must say, is not sufficient to cover even a fraction of the increased expenditure on account of the revision of salaries and the enhancement of Dearness Allowance. That aspect also the Hon'ble Members will have to take seriously into consideration.

Sri H. B. GUNDAPPA GOWDA.—Sales Tax can be raised.

The Hon'ble Sri H. SIDDAIYA.—There are so many difficulties. The demand is being made particularly from the mercantile class that the rate is very heavy. Anyhow we have not been able to realise as much as we had expected during the last year and this year also we will have to wait and see. Perhaps in the coming year there may be some unexpected thing as a result of which—I am afraid to say at this stage—we may not realise or may not go beyond Rs. 110 lakhs. That financial aspect in regard to that source will also have to be taken into consideration. Janab J. Mohamed Imam and other Hon'ble Members who were ex-Ministers—I am not casting any aspersions against any one of my esteemed friends here—were not able to introduce prohibition even in one district during their term. Another Hon'ble Member was saying as though this present Government had given an assurance that they would introduce this policy throughout the State within the course of three years. I do not remember there is any such definite assurance made. As Sri Madiah has pointed out, it will be a gradual process and the aim and object is to see that ultimately it is applied to the whole State.

Sri M. MADIAH.—In five years.

The Hon'ble Sri H. SIDDAIYA.—We are in the third year. Really it is with a view to implement this policy, the prohibition was introduced firstly in three districts and then in the other two districts. The income we had realised during 1946-47, *i.e.*, one or two years prior to the introduction of this prohibition was 206 lakhs of rupees. With this introduction of prohibition in the three districts during 1948-49 it went down to 201 lakhs. With the introduction of prohibition in the other two districts the income went down to 199 lakhs. During 1950-51 it was 189 lakhs. So, the income from this source is also going down.

Sri H. B. GUNDAPPA GOWDA.—We expected that it would rise.

The Hon'ble Sri H. SIDDAIYA.—Anyhow, it is the actual state of affairs. If I am not correct, I stand corrected. Within these two years we have anyhow lost a heavy amount but we do not feel sad for the simple reason it has its own advantage as I have said and Hon'ble Members are aware of it.

Now, the resolution runs to the effect that this may be introduced in the Hassan District from 1951-52. The financial aspect has to be considered and that is not the only consideration as I have already stated. There are other considerations also.

Sri H. B. GUNDAPPA GOWDA.—Before introducing prohibition in the neighbouring district what was the income in Hassan district?

The Hon'ble Sri H. SIDDAIYA.—It was about 23 lakhs. Last year it went up to 31 lakhs and now it is 35 lakhs. The loss of revenue is considerably big and therefore it is a matter for serious consideration. I can give an assurance to the Hon'ble Mover of this resolution that taking all these aspects into consideration, that while the policy is very desirable and must be pursued to the extent possible subject to so many considerations, the matter of introduction of prohibition in Hassan District will be gone into.

There was also a suggestion in the last Session that at least in the borders of this district prohibition should be introduced. This may be thought of. Whether it is the entire District or a portion of the District is a matter now for consideration. I can give an assurance to the mover of this resolution that.....

Sri H. B. GUNDAPPA GOWDA.—Take some courage.

The Hon'ble Sri H. SIDDAIYA.—With some courage I am speaking.....

Sri B. HUTCHE GOWDA.—That is lacking.

The Hon'ble Sri H. SIDDAIYA.—That is your opinion. Anyhow, the Government will have to consider the question before the sales of 1951-52 are to be held. Before the sales are ordered, this matter will be seriously considered.

Sri B. N. BORANNA GOWDA.—Upon the assurance.....

(Sri B. N. Boranna Gowda was found occupying some other seat).

Mr. CHAIRMAN.—Before I allow the Hon'ble Member to speak, I request him to go to his seat.

(At this stage, 11-3 A.M., Mr. Speaker, the Hon'ble Sri V. Venkatappa, occupied the Chair).

Sri H. SIDDAVEERAPPA (Chitaldrug District—General).—I want to know from the Hon'ble Minister for Excise whether they are contemplating to appoint a committee to go into this matter of introduction of prohibition and state how far it could be implemented. I think in Madhya Pradesh a committee has already been appointed. May I know, in view of the various problems that have arisen in this behalf, whether Government are thinking of appointing a committee to study how far prohibition as it exists to-day has been working?

The Hon'ble Sri H. SIDDAIYA.—I feel it may perhaps be too early to judge the failure or success of this scheme. We may have some patience and wait for some time more.

Sri B. HUTCHE GOWDA.—I press the amendment.

Mr. SPEAKER.—The question is:

"For the words 'Hassan District' substitute the words 'the remaining districts'."

The motion was negatived.

Sri B. N. BORANNA GOWDA.—Upon the assurance given by the Hon'ble Minister I withdraw the resolution with the permission of the House.

The resolution was, by leave of the House, withdrawn.

Mr. SPEAKER.—Next Resolution—Sm. Ratnamma Isaac.

Resolution No. 3.

Granting the requests made in Mysore State Women's Conference.

Srimathi M. RATNAMMA ISAAC (Kolar District—General).—I beg to move:

"That this Assembly is of opinion that the various resolutions passed by the Mysore State Women's Conference be considered and the requests made therein be granted."

Mushir-ul-Mulk J. MOHAMED IMAM (Chitaldrug *cum* Tumkur—Muslim).—Sir, on a point of information. We are not in possession of the various resolutions for considering them as is said in the Resolution. What the various resolutions are, I want to know.

Srimathi M. RATNAMMA ISAAC.—In the course of the speech I will tell them to the Hon'ble Member.

Janab J. MOHAMED IMAM.—You want a Ministership, I know. (Laughter).

Srimathi M. RATNAMMA ISAAC.—Sir, the Mysore State Women's Conference is a branch of the All-India Women's Conference which has been working for the last several years. It is now holding its conference this year in our beautiful city of Bangalore. Its aims and objects are as follows: to work actively for the general progress and welfare of women and children, to inculcate among women and children the ideals of true citizenship, to promote education along right lines, to work for social reforms, to establish equal rights and opportunities for men and women, to work for a united India, to set and demand a high moral standard in all departments of life, and work for international goodwill and world peace. With these noble objects the All-India Women's Conference is meeting in various places in India and the Mysore State Women's Conference is meeting in the different districts under the presidentship of well-known women leaders. As the Hon'ble Member desires, I cannot narrate all the resolutions that have been passed in our Conferences during the past 18 years, but, Sir, I am only bringing before the House such of the resolutions as have not been considered favourably by our Government. Many of the resolutions have been considered favourably by the Government. The requests for the uplift of women and children have been granted to us. But I wish to put before the House only four requests that have not yet been granted to us. As early as in 1943 when the Mysore State Women's Conference met in Dodballapur under the presidency of Srimathi N. Madhava Rau, the following resolution was moved by Srimathi Vasudevamurthi:

> "This Conference requests the Government of His Highness the Maharaja to appoint a lady in the Ministerial vacancy that has occurred."

Then again, under the presidency of Rajakumari Leelavathiavaru the same resolution was reiterated and we had no favourable reply so far.

The second resolution that has not been given effect to, or shall I say ignored, is about the post of the Chief Medical Officer. When we met together under the presidentship of Lady Mirza Ismail we thanked the Government of His Highness the Maharaja for establishing maternity and child-welfare homes in many towns and encouraging maternity and child welfare work in the State, and requested the Government to appoint a Lady Superintendent for supervising and consolidating the work of the maternity and child welfare homes throughout the State. Many of my brothers who have come from the various districts will bear themselves with me as to how many maternity homes are opened in these parts and how many of them are not at all functioning. About the same time, Dr. Sweet who was lent by the Rockefeller Foundation to our Department, established the post of Superintendent for Maternity and Child Welfare Bureau and our Conference eagerly expected that this lady's post would continue and she would visit all the maternity homes and all the welfare centres and work for the welfare of women and children, but unfortunately this lady resigned after two years and the Economy Officer, when he was retrenching so many posts, was good enough to retrench this very important post also. My request is that this post of Superintendent of Maternity and Child Welfare Centres for the whole State under the Health Department be immediately revived.

I have got two more requests. The third request is what was passed in our Conference several times. We were asking for the post of Chief Medical Officer for all the women's hospitals in the State. This post was given and we congratulated the Government. Even

in the All-India Women's Conference, Mrs. Cousins very nobly passed a resolution. I will quote the resolution:

"This Conference congratulates the Mysore Government on appointing a woman doctor as Chief Medical Officer for all the women's hospitals in the State and giving her equal status with the Senior Surgeon for all men's hospitals in the State. We have been very happy that she has been admitted on terms of absolute equal status with the Senior Surgeon in the State."

I mean Dr. Albuquerque. In our Conference, some people had a sort of fear that that post might cease and we passed this Resolution:

"This Conference in thanking the Government for their progressive policy in having appointed a lady doctor as Chief Medical Officer in charge of Women's hospitals, requests and strongly urges the desirability and need for making the appointment a permanent one and not let it cease with the term of the present incumbent."

However, that post has ceased. We congratulated the Government but unfortunately that post has ceased.

(Interruption).

Sri L. SIDDAPPA (Shimoga District—General).—He wants that he should be congratulated because he created the appointment.

Srimathi M. RATNAMMA ISAAC.—But I do not know who put an end to it.

The Mysore State women's desire is that if a lady doctor comes to the position of the seniormost doctor in the State, she may be given the post of the Senior Surgeon.

The Fourth resolution is about the nursing staff. Again and again, in our Conference we have passed resolutions regarding the nursing staff. One resolution is that they should be given eight hours' duty in order to get efficient work out of them. When labourers are supposed to do only eight hours' work a day, why should the poor nurses work for longer hours? You all know that some Hon'ble Members had brought forward interpellations in regard to nurses and hospitals saying that one nurse has been attending to more than 40 beds and these nurses have to stand on their legs for full 24 hours. Not only we but also the All-India Women's Conference have recommended that the nurses should be given only eight hours' duty, so that they may come singing into the ward with renewed strength and vigour and do efficient work for the patients.

These four requests of women that have been made by various Conferences may kindly be granted. I hope my Hon'ble brothers will all support me. Thank you.

Mr. SPEAKER.—Resolution moved:

"That this Assembly is of the opinion that the various resolutions passed by the Mysore State Women's Conference be considered and the requests made therein be granted."

***Janab J. MOHAMED IMAM.**—So far as I am concerned, I have always a very soft corner for ladies and always give the greatest respect to their demands.

Sri L. SIDDAPPA.—We will see how he implements them.

Janab J. MOHAMED IMAM.—I am voicing the feelings of this House. I know that ladies request for the appointment of a lady Minister and I am glad that ladies who form half the population have come forward and they want to take part in politics. There were always two views expressed regarding the question whether ladies should take up a prominent part in politics or whether their activities should be confined to home and other social matters. But I know the Women's Conference has been meeting every year. They have formed into a separate organisation and they are taking keen interest not only in social and domestic matters but in politics also, so much so a day may come when ladies may entirely displace gents and the entire Government may be composed of ladies.

Rajamantrapravina H. B. GUNDAPPA GOWDA (Hassan District—General).—It will not come like that.

Janab J. MOHAMED IMAM.—Perhaps the ladies know their limitations. Whatever has to be done by men is to be done by men and whatever has to be done by ladies is to be done by ladies. There are some things which ladies do, but which it is impossible for gents to do. Nature has fitted both men and women for different tasks. But Srimathi Ratnamma Isaac has placed before this House the demands from the ladies

